# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಸೋಮವಾರ, ಸೆಪ್ಟೆಂಬರ್ 16, 2024

ಸಂಪುಟ : 51 ಸಂಚಿಕೆ : 124 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಇತರೆ ಗಣ್ಯರು ಸಂವಿಧಾನ ಪೀಠಿಕೆ ವಾಚನ ಮಾಡಿದರು. ಬೃಹತ್ ಮಾನವ ಸರಪಳಿಯಲ್ಲಿ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# 80 ಕಿ.ಮೀ. ಮಾನವ ಸರಪಳಿ 85 ಸಾವಿರ ಜನ ಭಾಗಿ

ದಾವಣಗೆರೆ, ಸೆ. 15 -ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಶಿವಮೊಗ್ಗ ಗಡಿ ಗ್ರಾಮ ನ್ಯಾಮತಿ ತಾಲ್ಲೂಕಿನ ಟಿ.ಗೋಪಗೊಂಡನಹಳ್ಳಿಯಿಂದ ಹರಿಹರ ತಾಲ್ಲೂಕಿನ ಹಾವೇರಿ ಜಿಲ್ಲೆಯ ಗಡಿ ಗ್ರಾಮದವರೆಗೆ ಬೃಹತ್ ಮಾನವ ಸರಪಳಿ ಆಯೋಜಿಸಲಾಗಿತ್ತು.

80 ಕಿ.ಮೀ ಅಂತರದಲ್ಲಿ 85 ಸಾವಿರಕ್ಕಿಂತ ಹೆಚ್ಚಿನ ಜನರು ಭಾಗಿಯಾಗಿ ಮಾನವ ಸರಪಳಿ ನಿರ್ಮಿಸಿದ್ದರು.

ಶಾಲಾ, ಕಾಲೇಜಿನ ವಿದ್ಯಾರ್ಥಿಗಳು ಸಮವಸ್ತ್ರ ಹಾಗೂ ವಿವಿಧ ವೇಷಭೂಷಣಗಳಲ್ಲಿ ಭಾಗಿಯಾಗಿದ್ದರು. ಸ್ವಸಹಾಯ ಸಂಘದ ಸದಸ್ಯರು, ಆಶಾ ಕಾರ್ಯಕರ್ತೆಯರು, ಕಲಾವಿದರು, ಸಂಘ, ಸಂಸ್ಥೆಯವರು, ಸರ್ಕಾರಿ ನೌಕರರು, ಸಾರ್ವಜನಿಕರು, ಗ್ರಾಮ ಪಂಚಾಯಿತಿ ಸದಸ್ಯರು, ಜನಪ್ರತಿನಿಧಿಗಳು ಸೇರಿದಂತೆ ಸಹಸ್ರಾರು ಮಂದಿ ರಸ್ತೆಯುದ್ದಕ್ಕೂ ಎಡಬದಿಯಲ್ಲಿ ಮಾನವ ಸರಪಳಿ ನಿರ್ಮಾಣ ಮಾಡಿದರು.

ಮಾನವ ಸರಪಳಿ ಕಾರ್ಯಕ್ರಮದ ನಂತರ ಸಂವಿಧಾನ ಪೀಠಿಕೆ ವಾಚನ ಮಾಡಿದರು. ಹರಿಹರ ವೇದಿಕೆ ಕಾರ್ಯಕ್ರಮದಲ್ಲಿ ಭಾಗಿಯಾದ ಸಿದ್ದಗಂಗಾ ಶಾಲೆ ವಿದ್ಯಾರ್ಥಿಗಳು ವಿನೂತನವಾಗಿ ಭಾರತ ಭೂಪಟ ರಚನೆ ಮಾಡಿದರು.

## ಸೈದ್ಧಾಂತಿಕ ಉಗ್ರವಾದಿ ರಾಜಕೀಯದಿಂದ ಸಮಾಜಕ್ಕೆ ಬೆದರಿಕೆ

### ಸ್ವಾತಂತ್ರ್ಯ, ಸಮಾನತೆ ನೀಡುವ ಪ್ರಜಾಪ್ರಭುತ್ವ ಬಲಗೊಳಿಸಲು ಸಂಸದೆ ಡಾ. ಪ್ರಭಾ ಕರೆ

ದಾವಣಗೆರೆ, ಸೆ. 15 - ಸೈದ್ಧಾಂತಿಕ ಉಗ್ರವಾದದಿಂದ ಉತ್ತೇಜಿತವಾದ ರಾಜಕೀಯ ಧೃವೀಕರಣವು ಸಮಾಜವನ್ನು ಒಡೆಯುವ ಬೆದರಿಕೆ ಒಡ್ಡುತ್ತಿದೆ ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಕಳವಳ ವ್ಯಕ್ತಪಡಿಸಿದ್ದಾರೆ.

ಅವರು ಭಾನುವಾರ ಹರಿಹರದ ಮಹಾತ್ಮ ಗಾಂಧಿ ಮೈದಾನದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಹಾಗೂ ವಿವಿಧ ಸಂಘ, ಸಂಸ್ಥೆಗಳ ಸಹಯೋಗದಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಇತ್ತೀಚೆಗೆ ಪ್ರಜಾಪ್ರಭುತ್ವ ವ್ಯವಸ್ಥೆಗಳು ಅಗಾಧ ಒತ್ತಡ ಎದುರಿಸುತ್ತಿವೆ. ತಂತ್ರಜ್ಞಾನ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಹರಡುತ್ತಿರುವ ತಪ್ಪು ಮಾಹಿತಿಯು ಸತ್ಯವನ್ನು ಮಸುಕುಗೊಳಿಸಿದೆ ಎಂದು ಹೇಳಿದರು.

ಇದರಿಂದಾಗಿ ಜನರಲ್ಲಿ ಸಂಸ್ಥೆಗಳ ಬಗ್ಗೆ ಅಪನಂಬಿಕೆ ಮೂಡಿದೆ. ನಾಗರಿಕರಲ್ಲಿ ವಿಭಜನೆಯ ಬೀಜ ಬಿತ್ತಿದೆ ಎಂದು ಸಂಸದರು ಹೇಳಿದರು.

ಇಂದಿನ ಸಮಯದಲ್ಲಿ ಚುನಾವಣಾ ಪ್ರಕ್ರಿಯೆ ಕುಂಠಿತಗೊಳಿಸಲಾಗುತ್ತಿದೆ. ಮತದಾರರ ಹೆಸರುಗಳನ್ನು ಮತಪಟ್ಟಿಯಿಂದ ಡಿಲೀಟ್ ಮಾಡುವಂತಹ ಕ್ರಮಗಳಿಂದ ಮತದಾರರ ನಿಗ್ರಹ ನಡೆಯುತ್ತಿದೆ ಎಂದವರು ಹೇಳಿದರು.

ಸರ್ವಾಧಿಕಾರಿ ಆಡಳಿತಗಳು ಸಾಮಾನ್ಯವಾಗಿ ಸ್ಥಿರತೆಯ ಭರವಸೆ ನೀಡುತ್ತವೆ. ಆದರೆ, ಅವುಗಳು ದಬ್ಬಾಳಿಕೆಯ ಭಯವನ್ನೂ (2ನೇ ಪುಟಕ್ಕೆ)



## ವಿನೋಬನಗರ ಗಣಪತಿ ಅದ್ಧೂರಿ ಮೆರವಣಿಗೆ

**ಗಣಪತಿಗೆ ಪೂಜೆ ಸಲ್ಲಿಸಿ ಟ್ರ್ಯಾಕ್ಟರ್ ಚಲಾಯಿಸಿ, ಮೆರವಣಿಗೆಗೆ ಚಾಲನೆ ನೀಡಿದ ಸಚಿವ ಎಸ್ಸೆಸ್ಸೆಂ**

ದಾವಣಗೆರೆ, ಸೆ.15- ಇಲ್ಲಿನ ವಿನೋಬ ನಗರದ ವರಸಿದ್ಧಿ ವಿನಾಯಕ ಸೇವಾ ಸಮಿತಿಯಿಂದ 32ನೇ ವರ್ಷದ ಗಣೇಶೋತ್ಸವ ಆಚರಿಸಿ, 9ನೇ ದಿನದಂದು ಗಣಪನ ಮೂರ್ತಿಯ ವಿಸರ್ಜನೆಯ ಶೋಭಾಯಾತ್ರೆ ಭಾನುವಾರ ಅದ್ಧೂರಿಯಾಗಿ ಜರುಗಿತು.

ಡೊಳ್ಳು, ನಂದಿಕೋಲು ಕುಣಿತ, ಬ್ಯಾಂಡ್‌ಸೆಟ್ ಸೇರಿದಂತೆ ವಿವಿಧ ಕಲಾ ತಂಡಗಳ ಸದ್ದು, ಗಜ ರಾಜನ ಗಾಂಭೀರ್ಯ ನಡಿಗೆ ಹಾಗೂ ಡಿಜೆ ಹಾಡಿಗೆ ಕುಣಿದ ಯುವಕ-ಯುವತಿಯರು ಎಲ್ಲರನ್ನು ಆಕರ್ಷಿಸಿದರು.

ಅಲ್ಲಿನ ವರಸಿದ್ಧಿ ವಿನಾಯಕನಿಗೆ ಪೂಜೆ ಸಲ್ಲಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮಧ್ಯಾಹ್ನ 2.40ರ ವೇಳೆ ಗಣೇಶ ವಿಗ್ರಹವಿದ್ದ ಟ್ರ್ಯಾಕ್ಟರ್ ಚಲಿಸಿ, ಮೆರವಣಿಗೆಗೆ ಚಾಲನೆ ನೀಡಿದರು. ಪೊಲೀಸ್ ಇಲಾಖೆಯ ಬಿಗಿ (2ನೇ ಪುಟಕ್ಕೆ)



## ರಂಗಭೂಮಿ ವಿಶ್ವ ಮಟ್ಟಕ್ಕೆ ಬೆಳೆಯುವ ಹಂಬಲ

**ಕನಸು ಬಿತ್ತಿದ ಹಂಸಲೇಖ ವಾಸ್ತವ ತಿಳಿಸಿದ ಪಂಡಿತಾರಾಧ್ಯ ಸ್ವಾಮಿಜಿ**

ದಾವಣಗೆರೆ, ಸೆ. 15 - ಮಧ್ಯ ಕರ್ನಾಟಕದಲ್ಲಿ ರುವ ದಾವಣಗೆರೆಯು ಹಿಂದಿನಿಂದಲೂ ವೃತ್ತಿ ರಂಗಭೂಮಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಮುಂದಿನ ದಿನಗಳಲ್ಲಿ ವೃತ್ತಿ ರಂಗಭೂಮಿ ರಂಗಾಯಣದ ಮೂಲಕ ಜಾಗತಿಕವಾಗಿ ಬೆಳೆಯಲಿ ಎಂದು ಸಂಗೀತ ನಿರ್ದೇಶಕ ಹಂಸಲೇಖ ಆಶಿಸಿದರು.

ನಗರದ ಜೆ.ಜೆ.ಎಂ. ವೈದ್ಯಕೀಯ ಕಾಲೇಜು ಆವರಣದಲ್ಲಿರುವ ಬಾಪೂಜಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವೃತ್ತಿ ರಂಗಭೂಮಿ ರಂಗಾಯಣ ದಾವಣಗೆರೆಯ 2024-25ನೇ ಸಾಲಿನ ರಂಗ ಚಟುವಟಿಕೆಗಳ ನಾಂದಿ-ಆರಂಭೋತ್ಸವ ಕಾರ್ಯಕ್ರಮದ ರಂಗಜ್ಯೋತಿ ಬೆಳಗಿ ಅವರು ಮಾತನಾಡಿದರು.

ಥೈಲ್ಯಾಂಡ್‌ನ ಸಿಯಾಮ್ ನಿರಾಮಿತ್ ಹಾಗೂ ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ಬ್ರಾಡ್‌ವೇನಲ್ಲಿ ನಡೆಯುವ ನಾಟಕ ಪ್ರದರ್ಶನಗಳು ವಿಶ್ವದಾದ್ಯಂತ ಹೆಸರಾಗಿವೆ. ಅಲ್ಲಿನ ರಂಗಭೂಮಿಗಳು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುವ ತಂತ್ರಜ್ಞಾನ ಹೊಂದಿವೆ ಎಂದು ಹೇಳಿದರು.

ಬ್ರಾಡ್‌ವೇನ ಒಂದೇ ರಸ್ತೆಯಲ್ಲಿ 42 ರಂಗಮಂದಿರಗಳಿವೆ. ಇಲ್ಲಿ ನಾಟಕಕ್ಕೆ ತಕ್ಕ ಹಾಗೆ ರಂಗಮಂದಿರವನ್ನು ನಿರ್ಮಿಸಲಾಗುತ್ತದೆ. ಒಂದು ನಾಟಕ ಆರು ತಿಂಗಳವರೆಗೂ ಪ್ರದರ್ಶನ ಕಾಣುತ್ತದೆ. ನಾಟಕ ಹಾಗೂ ಸಂಗೀತಗಳು ಅಲ್ಲಿನ ಜನರ ಜೀವನದ ಭಾಗವಾಗಿವೆ. ಮಧ್ಯ ಕರ್ನಾಟಕ ದಾವಣಗೆರೆಯ ವೃತ್ತಿ ರಂಗಭೂಮಿಯೂ ಆ ಹಂತಕ್ಕೆ ಬೆಳೆಯುವ ಗುರಿ ಹೊಂದಬೇಕು ಎಂದು ಹೇಳಿದರು. ಆದರೆ, ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ರಂಗಭೂಮಿ ಜೀವಂತ (2ನೇ ಪುಟಕ್ಕೆ)

### 'ಖಂಡಿತಾರಾಧ್ಯ ಸ್ವಾಮೀಜಿ' ಎಂದ ಹಂಸಲೇಖ

**ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಅವರು ಸರಿಯಾದ ಸಮಯಕ್ಕೆ ಕಾರ್ಯಕ್ರಮಕ್ಕೆ ಬರುತ್ತಾರೆ. ಅಷ್ಟೇ ಅಲ್ಲದೇ ಅವರು ಸರಿಯಾದ ಮಾತುಗಳನ್ನೇ ಹೇಳುತ್ತಾರೆ. ಹೀಗಾಗಿ ಅವರು 'ಖಂಡಿತಾರಾಧ್ಯ ಸ್ವಾಮೀಜಿ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಬಣ್ಣಿಸಿದರು.**

**ಯಾವುದೇ ವೃತ್ತಿ ರಂಗಭೂಮಿ ಕಂಪನಿಯ ಹೆಸರು ಶ್ರೀ ಎಂದೇ ಆರಂಭವಾಗುತ್ತದೆ. ಹೀಗಾಗಿ ವೃತ್ತಿ ರಂಗಭೂಮಿಗೆ ಸಂಬಂಧಿಸಿದ ರಂಗಾಯಣದ ಹೆಸರೂ ಸಹ 'ಶ್ರೀ ವೃತ್ತಿ ರಂಗಭೂಮಿ' ಎಂದಿದ್ದರೇ ಸೂಕ್ತ ಎಂದೂ ಅವರು ಹೇಳಿದರು. ಕೊಂಡಜ್ಜಿಯಲ್ಲಿರುವ ರಂಗಾಯಣದ ಜಾಗದಲ್ಲಿ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ನಾಟಕವಾಗಿ ಪ್ರದರ್ಶಿಸಬೇಕು. ಇದಕ್ಕೆ ಸರ್ಕಾರದಿಂದ ಅನುದಾನ ಸಿಗುತ್ತದೆ. ಸಾರ್ವಜನಿಕರಿಂದ ಬರುವ ಹಣದಿಂದ ರಂಗಾಯಣದ ಕಾಮಗಾರಿಗಳಿಗೆ ನೆರವಾಗಲಿದೆ ಎಂದು ಹಂಸಲೇಖ ಸಲಹೆ ನೀಡಿದರು.**

## ಹೊನ್ನಾಳಿ ತಾಲ್ಲೂಕಿನಲ್ಲೂ ನನ್ನ ವಿರುದ್ಧ ಕುತಂತ್ರ

**ಸಭೆ ಆಯೋಜಿಸಿ, ಆರೋಪ ಸಾಬೀತು ಪಡಿಸಲು ಸಿದ್ಧ - ತರಳಬಾಳು ಶ್ರೀ**



ಹೊನ್ನಾಳಿ, ಸೆ. 15- ಹೊನ್ನಾಳಿ ತಾಲ್ಲೂಕಿನಲ್ಲೂ ನನ್ನ ವಿರುದ್ಧ ಕೆಲವರಿಂದ ಕುತಂತ್ರ ನಡೆಯುತ್ತಿದೆ. ಇದಕ್ಕೆ ತಾರ್ಕಿಕ ಅಂತ್ಯ ಕಂಡುಕೊಳ್ಳಬೇಕಿದೆ. ಶಾಸಕ ಶಾಂತನಗೌಡರು ಗೊಲ್ಲರಹಳ್ಳಿ ತರಳಬಾಳು ಸಮಾರಂಭದಲ್ಲಿ ಶ್ರೀಘ್ರುವೇ ಸಭೆ ನಡೆಸಿದರೆ ತಾವು ಬಂದು ಉತ್ತರಿಸಲು ಸಿದ್ದರಿದ್ದೇವೆ. ಆರೋಪ ಮಾಡುವವರು ಸಾಬೀತು ಪಡಿಸಬೇಕು, ಇಲ್ಲವಾದಲ್ಲಿ ತೆಪ್ಪಗಿರಬೇಕು, ಆರೋಪ ಸಾಬೀತು ಮಾಡದಿದ್ದರೆ ಒಂಟಿ ಕಾಲಲ್ಲಿ ನಿಂತು ತಮ್ಮ ತಪ್ಪು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಎಂ.ಹನುಮನಹಳ್ಳಿಯಲ್ಲಿ ಸಿರಿಗೆರೆ ಲಿಂಗೈಕ್ಯ ಗುರುಗಳ 32ನೇ ಶ್ರದ್ಧಾಂಜಲಿ ಸಮಾರಂಭಕ್ಕೆ 101 ಕ್ವಿಂಟಲ ಅಕ್ಕಿ ವಿತರಣಾ ಭಕ್ತಿ ಸಮರ್ಪಣೆಯ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ಮಠದಲ್ಲೂ, ರಾಜಕಾರಣದಂತೆ 'ಆಡಳಿತ ಪಕ್ಷಗಳು- ವಿರೋಧ ಪಕ್ಷಗಳು' ಸರ್ವೇಸಾಮಾನ್ಯ. ವಿರೋಧಪಕ್ಷದವರ ಆರೋಪಕ್ಕೆ ಧೈರ್ಯವಾಗಿ ಉತ್ತರಿಸಬೇಕಾದುದ್ದು ನಮ್ಮ ಧರ್ಮವಾಗಿದೆ ಎಂದ ಶ್ರೀಗಳು, ತಮ್ಮ ಮೇಲಿನ ಆರೋಪಗಳಿಗೆ ವಿವರವಾಗಿ ಉತ್ತರ ನೀಡಿದರು.

ನನ್ನ ಸ್ವಂತ ತಾಯಿಗೂ ಸಹ ಯಾವುದೇ ಸಹಾಯಮಾಡಲಾಗಲಿಲ್ಲ. ಪೂರ್ವಾಶ್ರಮದ ತಾಯಿ ಗಂಗಮ್ಮ ಸೇರಿದಂತೆ ಅನೇಕರಿಗೆ ಸಹಾಯವಾಗಲೆಂದು ತೆಗೆದುಕೊಂಡ ತೀರ್ಮಾನದ ಬಗ್ಗೆ ಶ್ರೀಗಳು ವಿವರಿಸುವಾಗ ಗದ್ಗದಿತರಾದರು.

ಶ್ರೀಮಠವು ಸ್ಮರಿಸುವ ನಿಷ್ಠಾವಂತ ಭಕ್ತರ ಸಾಲಿನಲ್ಲಿ (2ನೇ ಪುಟಕ್ಕೆ)

## ರಾಜೀನಾಮೆ ನೀಡುವುದಾಗಿ ಸಿಎಂ ಕೇಜ್ರಿವಾಲ್ ಘೋಷಣೆ



ನವದೆಹಲಿ, ಸೆ. 15 - ಎರಡು ದಿನಗಳ ನಂತರ ರಾಜೀನಾಮೆ ನೀಡುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಘೋಷಿಸಿದ್ದಾರೆ.

ಜನತೆ ತಮಗೆ ಪ್ರಾಮಾಣಿಕತೆಯ ಪ್ರಮಾಣ ಪತ್ರ ನೀಡುವವರೆಗೆ ಮುಖ್ಯಮಂತ್ರಿ ಗಾದಿಯಲ್ಲಿ ಕುಳಿತುಕೊಳ್ಳುವುದಿಲ್ಲ ಎಂದು ಹೇಳಿರುವ ಕೇಜ್ರಿವಾಲ್, ದೆಹಲಿಗೆ ಅವಧಿಗೆ ಮುಂಚೆಯೇ ಚುನಾವಣೆ ನಡೆಸಬೇಕು (2ನೇ ಪುಟಕ್ಕೆ)

## ಜನಗಣತಿಗೆ ಕೇಂದ್ರದ ಸಿದ್ಧತೆ ಆರಂಭ

ನವದೆಹಲಿ, ಸೆ. 15 - 10 ವರ್ಷಕ್ಕೊಮ್ಮೆ ನಡೆಸುವ ಜನಗಣತಿ ಕೈಗೊಳ್ಳಲು ಕೇಂದ್ರ ಸರ್ಕಾರ ಸಿದ್ಧತೆ ಆರಂಭಿಸಿದೆ. ಆದರೆ ಗಣತಿಯಲ್ಲಿ ಜಾತಿ ಕಾಲಂ ಸೇರಿಸುವ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಜನಗಣತಿ ನಡೆಸಲಾಗುವುದು ಎಂದು ಮೂಲಗಳು ಖಚಿತಪಡಿಸಿವೆ. 1881 ರಿಂದ ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿ ನಡೆಸಲಾಗುತ್ತಿದೆ.

2020ರ ಏಪ್ರಿಲ್ 1ರಂದು ಗಣತಿಯ ಮೊದಲ ಹಂತ ಆರಂಭವಾಗಬೇಕಿತ್ತು. ಆದರೆ, ಕೊರೋನ ಹಿನ್ನೆಲೆಯಲ್ಲಿ ಜನಗಣತಿಯನ್ನು ಮುಂದೂಡಲಾಗಿತ್ತು.

ಕಳೆದ ವರ್ಷ ಸಂಸತ್ತು ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತಂದಿದೆ. ಜನಗಣತಿ ನಡೆಸಿದ ನಂತರವೇ ಈ ಮೀಸಲಾತಿ ಜಾರಿಗೆ ಬರಲಿದೆ.

## ಬಾಪೂಜಿ ಬ್ಯಾಂಕ್‌ಗೆ 9.74 ಕೋಟಿ ರೂ. ನಿವ್ವಳ ಲಾಭ




### ಶೇ. 21ರಷ್ಟು ಡಿವಿಡೆಂಟ್ ಘೋಷಿಸಿದ ಶಾಸಕ ಎಸ್ಸೆಸ್

ದಾವಣಗೆರೆ, ಸೆ. 15- ಬಾಪೂಜಿ ಸಹಕಾರಿ ಬ್ಯಾಂಕ್ ಈ ವರ್ಷ 9.74 ಕೋಟಿ ನಿವ್ವಳ ಲಾಭಗಳಿಸಿದ್ದು, ನಮ್ಮ ಬಂಡವಾಳಕ್ಕೆ ಹೋಲಿಸಿದರೆ ಈ ಲಾಭ ಕಡಿಮೆ ಹಾಗಾಗಿ ಬೇರೆ ದೊಡ್ಡ ಊರುಗಳಲ್ಲಿ ಬ್ಯಾಂಕಿನ ಶಾಖೆ ತೆರೆದು ಹೆಚ್ಚಿನ ಸಾಲ ಸೌಲಭ್ಯ ನೀಡುವ ಮೂಲಕ ಇನ್ನು ಹೆಚ್ಚಿನ ಪ್ರಗತಿ ಸಾಧಿಸಲು ಶ್ರಮಿಸುವುದಾಗಿ ಬ್ಯಾಂಕಿನ ಅಧ್ಯಕ್ಷರೂ ಆದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ತಿಳಿಸಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಜರುಗಿದ ಬ್ಯಾಂಕಿನ 55ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಷೇರುದಾರರಿಗೆ ಶೇ. 21ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ನಿರ್ಧರಿಸಿದೆ ಎಂದು ಸದಸ್ಯರ ಕರತಾಡನೆಗಳ ಮಧ್ಯೆ ಘೋಷಿಸಿದರು.

ಈಗಾಗಲೇ ಅತಿ ಹೆಚ್ಚು ಶ್ರೀಮಂತ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳಿರುವ ಮುದೋಳದಲ್ಲಿ ಬಾಪೂಜಿ ಬ್ಯಾಂಕ್ ನ ಶಾಖೆಯನ್ನು ಆರಂಭಿಸಲು ಸಿದ್ಧತೆ ನಡೆದಿದ್ದು ಬರುವ ಅಕ್ಟೋಬರ್ ಮೊದಲ ವಾರದಲ್ಲಿ ಶಾಖೆ ಕಾರ್ಯಾರಂಭ ಮಾಡಲಿದೆ ಎಂದು ತಿಳಿಸಿದರು. ಅದೇ ರೀತಿ ಹಾವೇರಿ ರಾಣೆಬೆನ್ನೂರು, ಬೆಂಗಳೂರು ಸೇರಿದಂತೆ ಇನ್ನು ಕೆಲವು ಕಡೆ ಹೊಸ ಶಾಖೆಗಳನ್ನು ತೆರೆದು ಸಾಲ ಸೌಲಭ್ಯ ಕಲ್ಪಿಸುವ ಮೂಲಕ ಬ್ಯಾಂಕ್ ಇನ್ನು ಹೆಚ್ಚಿನ ಪ್ರಗತಿ ಸಾಧಿಸುವಲ್ಲಿ ಆಡಳಿತ ಮಂಡಳಿ ಮುಂದಾಗಿದೆ ಎಂದು ತಿಳಿಸಿದರು.

900 ಕೋಟಿಗೂ ಹೆಚ್ಚು ಬಂಡವಾಳವಿದೆ. ಕಳೆದ ವರ್ಷಕ್ಕಿಂತ 99 ಲಕ್ಷ ಲಾಭ ಹೆಚ್ಚಳವಾಗಿದೆ ಷೇರುಬಂಡವಾಳ ಠೇವಣಿ ಸಂಗ್ರಹ ಸೇರಿ ಎಲ್ಲ ವಿಧದಲ್ಲೂ ಬ್ಯಾಂಕ್ ಪ್ರತಿವರ್ಷ ಪ್ರಗತಿಯನ್ನು ಸಾಧಿಸುತ್ತಾ ಬಂದಿದೆ. ಬಹಳ ಹಿಡಿತದಿಂದ ಸಾಲವನ್ನು ನೀಡಲಾಗುತ್ತಿದೆ. ಮರುಪಾವತಿ ಮಾಡುವ ಶಕ್ತಿ ಸಾಲಗಾರನಿಗೆ ಇದೆ ಎಂದಾಗ ಮಾತ್ರ ಸಾಲ ಮಂಜೂರು ಮಾಡಲಾಗುತ್ತಿದೆ ಎಂದರು.

ದಾವಣಗೆರೆಯಲ್ಲಿ ಹತ್ತಾರು ಸಹಕಾರಿ ಬ್ಯಾಂಕುಗಳಿವೆ. ಅವುಗಳಿಗೆಲ್ಲ ಬಾಪೂಜಿ ಬ್ಯಾಂಕನ್ನು ಹಿಂದಕ್ಕೆ ಹಾಕಿ ಮುಂದೆ ಬರಬೇಕು ಎಂಬ ಆಸೆ ಆದರೆ ಅದು ಆಗುತ್ತಿಲ್ಲ ಅದಕ್ಕೆಲ್ಲ ನಮ್ಮ ಸದಸ್ಯರು ಬಾಪೂಜಿ ಬ್ಯಾಂಕಿನ ಆಡಳಿತ ಮಂಡಳಿ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸ, ಬೆಂಬಲ ಮತ್ತು ಸಹಕಾರ ನೀಡುತ್ತಿರುವುದರಿಂದ ಬ್ಯಾಂಕ್ ಉನ್ನತ ಮಟ್ಟದಲ್ಲಿ ಸಾಗಿದೆ ಆದರೆ ಅದನ್ನು ನಾವು ಹೇಳಿ ಕೊಚ್ಚಿಕೊಳ್ಳಲು ಹೋಗುವುದಿಲ್ಲ ಎಂದರು.

ಬ್ಯಾಂಕಿನ ಹಿರಿಯ ನಿರ್ದೇಶಕ ಎ.ಎಸ್. ವೀರಣ್ಣ ಮಾತನಾಡಿ, 1970ರಲ್ಲಿ ಬ್ಯಾಂಕ್ ಆರಂಭವಾದ ದಿನಗಳಲ್ಲಿ ಶೇಕಡ 6ರಷ್ಟು ಲಾಭಾಂಶ ನೀಡುತ್ತಿದ್ದ ಬ್ಯಾಂಕ್ ಈಗ ಅದರ ಮೂರು ಪಟ್ಟು ಲಾಭಾಂಶವನ್ನು ಸದಸ್ಯರಿಗೆ (2ನೇ ಪುಟಕ್ಕೆ)


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಜಿ.ಎಂ ಸೋಮನಾಥ್ ಮತ್ತು ಜಿ.ಎಂ. ಅಭಿನಂದನ್** ಇರ್ವರೂ ದಿವಂಗತ ಶ್ರೀ ಮಲ್ಲಿಕಾರ್ಜುನಪ್ಪ ಇವರ ಪುತ್ರರಾಗಿದ್ದು, ಇವರು ಸಿದ್ದವೀರಪ್ಪ ಬಡಾವಣೆ. ದಾವಣಗೆರೆಯಲ್ಲಿ ವಾಸವಿರುತ್ತಾರೆ ಇವರು ನೀಡಿದ ಮಾಹಿತಿ ಮೇರೆಗೆ ಸಾರ್ವಜನಿಕ ತಿಳುವಳಿಕೆಗಾಗಿ ನೀಡುವ ಈ ಪ್ರಕಟಣೆಯ ಸಾರಾಂಶವೇನೆಂದರೆ,

ದಾವಣಗೆರೆ ಸಿಟಿ, ಕಸಬಾ ಹೋಬಳಿ, ಸರ್ವೆ ನಂ.124/2 ರಲ್ಲಿ ಇರುವ ಸೈಟ್ ನಂ.60, 61, 48, 59, 06 ಇವುಗಳ ಡೋರ್ ನಂ. 1303/60, 1303/61, 1303/06, 1303/48, 1303/59 ಪ್ರಸ್ತುತ ವಿಜಯನಗರ ಬಡಾವಣೆಯಲ್ಲಿ ಇದ್ದು, ದಾವಣಗೆರೆ ಮಹಾನಗರ ಪಾಲಿಕೆಯ ವಾರ್ಡ್ ನಂ. 21 ರ ವ್ಯಾಪ್ತಿಗೆ ಬರುತ್ತವೆ. ಈ ಮೇಲ್ಕಂಡ ಎಲ್ಲಾ ಸೈಟುಗಳನ್ನು ನನ್ನ ಕಕ್ಷಿದಾರರಾದ ಸೋಮನಾಥ್ ಮತ್ತು ಅಭಿನಂದನ್ ಇವರ ತಂದೆ ದಿವಂಗತ ಮಲ್ಲಿಕಾರ್ಜುನಪ್ಪ ಇವರು ದಿನಾಂಕ: 03.02.1990 ರಂದು ಕೆ. ನಾರಪ್ಪ ಬಿನ್ ಮುನಿಯಪ್ಪ, ಕಡ್ಲೇಬಾಳು ನಂಜಪ್ಪ ಗಲ್ಲಿ, ದಾವಣಗೆರೆ ಇವರಿಂದ ಶುದ್ಧ ಕ್ರಯಕ್ಕೆ ಪಡೆದಿದ್ದು, ಸದರಿ ಎಲ್ಲಾ ಸೈಟುಗಳು ನನ್ನ ಕಕ್ಷಿದಾರರಾದ ಸೋಮನಾಥ್ ಮತ್ತು ಅಭಿನಂದನ್ ಇವರ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿರುತ್ತವೆ. ಈ ಸಂಬಂಧವಾಗಿ ನನ್ನ ಕಕ್ಷಿದಾರರು ದಾವಣಗೆರೆಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ ನಂ.219/2020 ರಂತೆ ಮಾಲೀಕತ್ವ ಘೋಷಣೆಗೆ ದಾವೆಯನ್ನು ದಿವಂಗತ ಕೆ. ನಾರಪ್ಪ ಇವರ ಮಕ್ಕಳಾದ ಕೆ. ಮಂಜುನಾಥ, ಕೆ. ನಂಜಪ್ಪ, ಕೆ. ಶಿವಕುಮಾರ ಇವರುಗಳ ವಿರುದ್ಧ ಹೂಡಿದ್ದು, ಸದರಿ ದಾವೆಯು ವಿಚಾರಣೆಯ ಹಂತದಲ್ಲಿ ಇರುತ್ತದೆ. ಈ ಎಲ್ಲಾ ಅಂಶಗಳನ್ನು ತಿಳಿದಿದ್ದರೂ ಮೇಲ್ಕಂಡ ದಿವಂಗತ ಕೆ. ನಾರಪ್ಪ ಇವರ ಮಕ್ಕಳಾದ ಕೆ. ಮಂಜುನಾಥ, ಕೆ. ನಂಜಪ್ಪ, ಕೆ. ಶಿವಕುಮಾರ ಅವರುಗಳು ಮೇಲ್ಕಾಣಿಸಿದ ಆಸ್ತಿಗಳನ್ನು ಮಾರಾಟ ಮಾಡಲು ಮತ್ತು ನಮ್ಮ ಕಕ್ಷಿದಾರರ ಸ್ವಾಧೀನಕ್ಕೆ ಅಡಚಣೆ ಮಾಡಲು ಪ್ರಯತ್ನಿಸಿರುವುದು ಕಂಡು ಬಂದಿರುತ್ತದೆ. ಹಾಗಾಗಿ ಸಾರ್ವಜನಿಕರು ಮೇಲ್ಕಂಡ ಆಸ್ತಿಗಳ ಸಂಬಂಧವಾಗಿ ಯಾವುದೇ ರೀತಿಯ ವ್ಯವಹಾರವನ್ನು ಮಾಡಬಾರದೆಂದು ಮನವಿ. ಒಂದೊಮ್ಮೆ ಮಾಡಿದ್ದಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿದಾರರುಗಳಿಗೆ ಬಂಧನಕಾರಿಯಾಗುವುದಿಲ್ಲವೆಂದು ಈ ಮೂಲಕ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ.

ಜಿ.ಎಂ. ಸೋಮನಾಥ್
ಜಿ.ಎಂ. ಅಭಿನಂದನ್
ದಾವಣಗೆರೆ
ದಿನಾಂಕ : 09.09.2024

ಸಹಿ/-
(ಟಿ.ಆರ್. ಗುರುಬಸವರಾಜ್)
ವಕೀಲರು
# 02, 1ನೇ ಮಹಡಿ, ಶ್ರೀ ಮುರಘರಾಜೇಂದ್ರ ಕಾಂಪ್ಲೆಕ್ಸ್, ಜಯದೇವ ಸರ್ಕಲ್ ಹತ್ತಿರ, ಹದಡಿ ರಸ್ತೆ, ದಾವಣಗೆರೆ - 577002

# ಪ್ರಸ್ತುತ ಕುಂಠಿತಗೊಳ್ಳುತ್ತಿರುವ ಪ್ರಜಾಪ್ರಭುತ್ವ ಮೌಲ್ಯಗಳು



## ರಾಣೇಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ ವ್ಯಾಕುಲತೆ

ರಾಣೇಬೆನ್ನೂರು, ಸೆ. 15 - ವಿಶ್ವದಲ್ಲಿಯೇ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತ ಎನ್ನುವುದು ಹೆಮ್ಮೆಯ ಸಂಗತಿ. ಇಂದು ಪ್ರಜಾಪ್ರಭುತ್ವ ಮೌಲ್ಯಗಳು ಕುಂಠಿತಗೊಳ್ಳುತ್ತಿವೆ, ಪ್ರಜಾಪ್ರಭುತ್ವ ಉಳಿಸಿ ಬೆಳೆಸುವುದು ಪ್ರತಿ ಪ್ರಜೆಯ ಕರ್ತವ್ಯವಾಗಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ರವಿವಾರ ನಗರದ ಆರ್.ಟಿ.ಇ.ಎಸ್. ಕಾಲೇಜು ಮುಂಭಾಗ ಜಿಲ್ಲಾಡಳಿತ, ಜಿ.ಪಂ. ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಬೃಹತ್ ಮಾನವ ಸರಪಳಿ ನಿರ್ಮಾಣ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಇಡೀ ವಿಶ್ವದಲ್ಲಿಯೇ ಪವಿತ್ರ ಹಾಗೂ ಶಕ್ತಿಯುತವಾದ ಪ್ರಜಾಪ್ರಭುತ್ವವನ್ನು ಹೊಂದಿರುವ ದೇಶ ಭಾರತ. ಇಂತಹ ನಮ್ಮ ದೇಶವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆ. ನಮ್ಮ ದೇಶದಲ್ಲಿ 2.5 ಸಾವಿರ ರಾಜಕೀಯ ಪಕ್ಷಗಳು ಇವೆ. ಅದರಲ್ಲಿ 20 ಪಕ್ಷಗಳು ದೇಶದಲ್ಲಿ ಆಡಳಿತವನ್ನು ನಡೆಸುತ್ತಿವೆ. ದುರಂತವೆಂದರೆ 180ಕ್ಕೂ ಅಧಿಕ ಸಂಸದರು ಕ್ರಿಮಿನಲ್ ಮೊಕದ್ದಮೆಯಲ್ಲಿದ್ದಾರೆ ನಿಜಕ್ಕೂ ಇದು ವಿಷಾದದ ಸಂಗತಿ. ಇಂತಹ ವ್ಯವಸ್ಥೆಯನ್ನು ಬದಲಾಯಿಸುವ ಅಗತ್ಯವಿದೆ ಎಂದರು.

ಶಿಕ್ಷಣದಿಂದ ಮಾತ್ರ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಹೋಗಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ವರೂ ಜಾತೀಯತೆ ಬಿಟ್ಟು ನಮ್ಮ ಸಂವಿಧಾನ, ನಮ್ಮ ಪ್ರಜಾಪ್ರಭುತ್ವ, ನಮ್ಮ ದೇಶ ಎಂಬ ಮನೋಭಾವನೆಯಿಂದ ಮುನ್ನಡೆದಾಗ ಮಾತ್ರ ನಾವು ಪ್ರಜಾಪ್ರಭುತ್ವ ದಿನಾಚರಣೆಯನ್ನು ಆಚರಿಸಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಹಿರೇಕೇರೂರ ಶಾಸಕ ಯು.ಬಿ. ಬಣಕಾರ ಮಾತನಾಡಿ, ಪ್ರಜಾಪ್ರಭುತ್ವದ ಆಶಯಗಳು ಹಾಗೂ ಮೌಲ್ಯಗಳು ಕಡಿಮೆಯಾಗುತ್ತಿವೆ. ಅವುಗಳನ್ನು ಎತ್ತಿಹಿಡಿಯುವ ಕೆಲಸವಾಗಬೇಕು. ವಿಶ್ವಸಂಸ್ಥೆಯು 2007ರಲ್ಲಿ ಪ್ರಜಾಪ್ರಭುತ್ವ ದಿನಾಚರಣೆ ಜಾರಿಗೆ ತಂದಿತು. 2008ರಿಂದ ಅಂತರಾಷ್ಟ್ರೀಯ ಪ್ರಜಾಭುತ್ವ ದಿನಾಚರಣೆ ಆಚರಿಸಲಾಗುತ್ತಿದೆ. ಮಹಾತ್ಮಗಾಂಧೀಜಿ ಸೇರಿದಂತೆ ಸ್ವಾತಂತ್ರ್ಯ ಹೋರಾಟಗಾರರು ಸಂವಿಧಾನ ಕರಡು ಸಮಿತಿ ರಚಿಸಿದರು. ಎಲ್ಲರಿಗೂ ಸಮಾನ ಅವಕಾಶ ದೊರೆಯುವ ಬಹುದೊಡ್ಡ ಲಿಖಿತ ಸಂವಿಧಾನ ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ನಾವು ಸ್ಮರಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ ಮಾತನಾಡಿ, ಚುನಾವಣೆ ಮೂಲಕ ಹೊಸ ಸರ್ಕಾರಗಳ ಆಯ್ಕೆ ಪ್ರಜಾಪ್ರಭುತ್ವದಲ್ಲಿ ಮಾತ್ರ ಮಾಡಲಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಮತದಾನ ಹಕ್ಕು, ಪ್ರಜಾಸ್ವಾತಂತ್ರ್ಯ ಹಾಗೂ ಕಾನೂನು ಸೌಲಭ್ಯಗಳು ಸೇರಿದಂತೆ ಅನೇಕ ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಆದರೆ ಬೇರೆ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದರೂ ಸಹ ಅವರಿಗೆ ಪ್ರಜಾಸ್ವಾತಂತ್ರ್ಯ ಇರುವುದಿಲ್ಲ ಎಂದರು.

ಗ್ಯಾರಂಟಿ ಯೋಜನೆಗಳ ರಾಜ್ಯ ಉಪಾಧ್ಯಕ್ಷ ಎಸ್.ಆರ್. ಪಾಟೀಲ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತುಕೊಳ್ಳಬೇಕು. ಇದೊಂದು ಅವಿಸ್ಮರಣೀಯ ಕಾರ್ಯಕ್ರಮ ಎಂದು ಬಣ್ಣಿಸಿದರು.

ಹಾವೇರಿ ನಗರಸಭೆ ಅಧ್ಯಕ್ಷರಾದ ಶಶಿಕಲಾ ಮಾಳಗಿ, ಉಪಾಧ್ಯಕ್ಷ ಮಲ್ಲಿಕಾರ್ಜುನ ಸಾತೇನಹಳ್ಳಿ, ಜಿ.ಪಂ. ಇಓ ಅಕ್ಷಯ್ ಶ್ರೀಧರ, ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ ಪೂಜಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ, ತಹಶೀಲ್ದಾರ್ ಆರ್.ಎಸ್. ಭಗವಾನ್, ಪೌರಾಯುಕ್ತ ಎಫ್.ಐ. ಇಂಗಳಗಿ, ಕ್ಷೇತ್ರ ಶಿಕ್ಷಣಾಧಿಕಾರಿ ಶಾಮಸುಂದರ ಅಡಿಗ, ನಗರಸಭಾ ಸದಸ್ಯರಾದ ಪುಟ್ಟಪ್ಪ ಮರಿಯಮ್ಮನವರ, ಗಂಗಮ್ಮ ಹಾವನೂರ, ಶೇಖಪ್ಪ ಹೊಸಗೌಡ್ರ, ಮಂಜುಳಾ ಹತ್ತಿ, ಜಿ.ಪಂ. ಮಾಜಿ ಅಧ್ಯಕ್ಷ ಏಕನಾಥ ಬಾನುವಳ್ಳಿ, ವೀರನಗೌಡ ಪೊಲೀಸಗೌಡ್ರ, ರಾಮಣ್ಣ ನಾಯಕ ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿಯು ತಾಲ್ಲೂಕಿನ ಕುಮಾರಪಟ್ಟಣ ತುಂಗಭದ್ರ ನದಿಯಿಂದ ಗದಗ ಜಿಲ್ಲೆಯ ಬಾಲೆಹೊಸೂರಿನವರೆಗೆ ಜರುಗಿತು.

# ಏಕತೆ ನೆಪದಲ್ಲಿ ವಿಭಜಿಸುವ ಶಕ್ತಿಗಳು: ಸಿದ್ದರಾಮಯ್ಯ



ಬೆಂಗಳೂರು, ಸೆ. 15 - ಏಕತೆ ನೆಪದಲ್ಲಿ ಸಮಾಜವನ್ನು ಒಡೆಯುವ, ಮನುಷ್ಯರನ್ನು ವಿಭಜಿಸುವ ವಿಚ್ಛಿದ್ರಕಾರಕ ದುಷ್ಟ ಶಕ್ತಿಗಳನ್ನು ನಾಶ ಮಾಡಲು ಪ್ರಜಾಪ್ರಭುತ್ವವಾದಿಗಳು ಎದ್ದು ನಿಲ್ಲಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

**ಪ್ರಜಾಪ್ರಭುತ್ವ ದಿನಾಚರಣೆ: ಮಾನವ ಸರಪಳಿ ಉದ್ಘಾಟಿಸಿದ ಮುಖ್ಯಮಂತ್ರಿ**

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಅಂಗವಾಗಿ ಮಾನವ ಸರಪಳಿ ಚಳವಳಿಯನ್ನು ವಿಧಾನಸೌಧದ ಮುಂಭಾಗ ಉದ್ಘಾಟಿಸಿ ಅವರು ಮಾತನಾಡಿದರು.

ಕೆಲ ವಿಚ್ಛಿದ್ರಕಾರಕ ದುಷ್ಟಶಕ್ತಿಗಳು ಏಕತೆ ಭಜನೆ ಮಾಡುತ್ತಾ ಸಾಮಾಜಿಕ ನ್ಯಾಯ ಹಾಗೂ ಸಮಾನತೆ ವಿರೋಧಿಸುತ್ತಿದ್ದಾರೆ. ಇವರು ಸಮಾಜದ ಶತ್ರುಗಳು. ಇವರನ್ನು ಮೆಟ್ಟಿ ನಿಲ್ಲದ ಹೊರತು ಮಹಿಳೆಯರು, ದಲಿತರು, ಹಿಂದುಳಿದವರಿಗೆ ಹಕ್ಕುಗಳು ಸಿಗಲು ಸಾಧ್ಯವಾಗುವುದಿಲ್ಲ ಎಂದು ಮುಖ್ಯಮಂತ್ರಿ ಹೇಳಿದರು. ಇವರು ಬಡವರ ಪರವಾದ ಕಾರ್ಯಕ್ರಮಗಳು ಜಾರಿ ಆಗಲು ಬಿಡುವುದಿಲ್ಲ. ಆದ್ದರಿಂದ ಇವರನ್ನು ನಾವು ಸೋಲಿಸಬೇಕು. 20 ಲಕ್ಷಕ್ಕೂ ಹೆಚ್ಚು ಮಂದಿಯ ಮಾನವ ಸರಪಳಿ ರಚಿಸಿರುವುದೇ ದುಷ್ಟಶಕ್ತಿಗಳಿಗೆ ಎಚ್ಚರಿಕೆ ನೀಡಿ ಮನುಷ್ಯ ಸಮಾಜವನ್ನು ಬೆಸೆಯುವುದಕ್ಕೆ ಎಂದು ಸಿದ್ದರಾಮಯ್ಯ ಹೇಳಿದರು. ಸಮಾಜದಲ್ಲಿರುವ ಅಸಮಾನತೆ ತೊಡೆದು ಹಾಕುವವರೆಗೂ ದೇಶಕ್ಕೆ ಸಿಕ್ಕ ಸ್ವಾತಂತ್ರ್ಯಕ್ಕೆ ಅರ್ಥ ಇರುವುದಿಲ್ಲ. ನಮ್ಮ ಸರ್ಕಾರ ಸಮಾನತೆ ಸಾಧಿಸುವ ದಿಕ್ಕಿನಲ್ಲಿ, ಎಲ್ಲಾ ಜಾತಿ-ಎಲ್ಲಾ ಧರ್ಮದ ಬಡವರಿಗೆ, ಮಧ್ಯಮ ವರ್ಗದವರಿಗೆ ಶಕ್ತಿ ತುಂಬುವ ಕಾರ್ಯಕ್ರಮ ರೂಪಿಸಿ ಜಾರಿ ಮಾಡಿದ್ದೇವೆ ಎಂದು ಹೇಳಿದರು.

ಸಂವಿಧಾನದ ಪೀಠಿಕೆಯಲ್ಲಿ ಅತ್ಯಂತ ದೊಡ್ಡ ಮೌಲ್ಯಗಳಿವೆ. ಹೀಗಾಗಿಯೇ ಪ್ರತಿ ದಿನ ಶಾಲಾ ಕಾಲೇಜುಗಳಲ್ಲಿ ಇದನ್ನು ಓದಿಸುವ, ಅರ್ಥೈಸುವ, ಪಾಲಿಸುವ ಪ್ರಯತ್ನ ಮುನ್ನಡೆಸಿದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದರು.

## ಸಾಮರಸ್ಯ ಹಾಳು ಮಾಡಬೇಡಿ ಮಟ್ಟಿಕಲ್ ವೀರಭದ್ರಸ್ವಾಮಿ ಕಳಕಳಿ

ದಾವಣಗೆರೆ, ಸೆ.15- ಜಿಲ್ಲೆಯ ಬಿಜೆಪಿ ಮುಖಂಡರು ಸಾಮರಸ್ಯ ಹಾಳು ಮಾಡಬಾರದು ಎಂದು ಕಾಂಗ್ರೆಸ್ ಮುಖಂಡ ಮಟ್ಟಿಕಲ್ ವೀರಭದ್ರಸ್ವಾಮಿ ಹೇಳಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಗಣೇಶನ ಮೂರ್ತಿ ಪ್ರತಿಷ್ಠಾಪನೆಗೆ ಜಿಲ್ಲಾಡಳಿತ ಬಿಗಿ ಕ್ರಮ ಕೈಗೊಂಡ ಕುರಿತು ಬಿಜೆಪಿ ಮುಖಂಡರು ಆರೋಪ ಮಾಡಿರುವುದು ಸರಿಯಲ್ಲ ಎಂದು ಹೇಳಿದರು.

ಬಿಜೆಪಿ ನಾಯಕರು ಹಿಂದುತ್ವದ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಹಿಂದುತ್ವಕ್ಕಾಗಿ ಹೋರಾಟ ಮಾಡಿದ ಯಾರಿಗೂ ಉಪಕಾರ ಮಾಡಿಲ್ಲ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಕಾಯಿಪೇಟೆ ಹಾಲೇಶ್, ಕರೂರು ಗಣೇಶ್, ಸಿರಿಗೆರೆ ಬಸವರಾಜ್, ಅಣಜಿ ಬಸವರಾಜ್, ಹೆಚ್.ರುದ್ರೇಶ್ ಆನೆಕೊಂಡ ಇದ್ದರು.

## ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಸೆ.15- ಎಐಡಿಎಸ್‌ಓ ವತಿಯಿಂದ ಇದೇ ದಿನಾಂಕ 28 ರಂದು ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ 117 ನೇ ಜನ್ಮದಿನದ ಅಂಗವಾಗಿ 'ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಗತ್ ಸಿಂಗ್‌ರ ಪಾತ್ರ' ಎಂಬ ವಿಷಯ ಕುರಿತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ನಿಗದಿತ ದಿನಾಂಕದಂದು ಸಂಬಂಧಿಸಿದ ಶಾಲೆ, ಕಾಲೇಜು, ಸಂಸ್ಥೆಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಗುವುದು ಎಂದು ಜಿಲ್ಲಾ ಕಾರ್ಯದರ್ಶಿ ಸುಮನ್ ಟಿ.ಎಸ್ ತಿಳಿಸಿದ್ದಾರೆ. ವಿವರಕ್ಕೆ ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷರಾದ ಪೂಜಾ ನಂದಿಹಳ್ಳಿ (95914 06615) ಅವರನ್ನು ಸಂಪರ್ಕಿಸಬಹುದು.

## ಹೊಲಿಗೆ ಯಂತ್ರ ಖರೀದಿಗೆ ಅರ್ಜಿ

ದಾವಣಗೆರೆ, ಸೆ. 15 - ಹೊಲಿಗೆ ತರಬೇತಿ ಪಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಸಮುದಾಯಕ್ಕೆ ಸೇರಿದ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ಖರೀದಿಸಿ ವಿತರಿಸುವ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಮಹಾನಗರ ಪಾಲಿಕೆಯ ವೆಬ್‌ಸೈಟ್ www.davanagerecity.gov.in ಮೂಲಕ ಅಥವಾ ಕಚೇರಿಗೆ ಖುದ್ದು ಭೇಟಿ ನೀಡಿ ಇದೇ ದಿನಾಂಕ 26 ರೊಳಗಾಗಿ ಕಚೇರಿಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಲ್ಯಾಣ ಶಾಖೆ, ಮಹಾನಗರಪಾಲಿಕೆ, ದಾವಣಗೆರೆ (ಹಳೇ ಕಂದಾಯ ಶಾಖೆ ಕಟ್ಟಡ) ಇಲ್ಲಿ ಸಂಪರ್ಕಿಸಲು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

# ಮಕ್ಕಳಿಗೆ ಶಿಸ್ತಿನ ಜೊತೆ ವಿನಯ ಕಲಿಸಬೇಕು

## ಹರಪನಹಳ್ಳಿ: ಚೆಸ್ ಪಂದ್ಯಾವಳಿಯಲ್ಲಿ ಡಿವೈಎಸ್ಪಿ ಡಾ.ವೆಂಕಟಪ್ಪ ನಾಯಕ

ಹರಪನಹಳ್ಳಿ, ಸೆ.15- ಶಿಸ್ತು ಇರುವ ಕಡೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಇರುತ್ತದೆ. ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಶಿಸ್ತು ಮತ್ತು ವಿನಯವನ್ನೂ ಕಲಿಸಬೇಕು ಎಂದು ಡಿವೈಎಸ್ಪಿ ಡಾ.ವೆಂಕಟಪ್ಪ ನಾಯಕ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಪರ್ಲ್ ಪಬ್ಲಿಕ್ ಶಾಲೆಯಲ್ಲಿ ದಕ್ಷಿಣ ವಲಯದ ಚೆಸ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚದುರಂಗ ಆಟಕ್ಕೆ ಏಕಾಗ್ರತೆ ಬೇಕೇ ಬೇಕು. ಇದೇ ಕಾರಣಕ್ಕೆ ಇದು ಬುದ್ಧಿವಂತರ ಆಟ ಎಂದು ಕರೆಸಿಕೊಳ್ಳುವುದು. ಈ ಆಟ ಕೆಲವರಿಗೆ ಚಟವಾಗಿಯೂ ಕಾಡುವುದುಂಟು, ಇದನ್ನು ಜೂಜಾಟವನ್ನಾಗಿಯೂ ಕೆಲವರು ಪರಿಗಣಿಸುತ್ತಾರೆ. ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳು ಬಹುಮುಖ್ಯವಾಗಿವೆ. ಚಿಕ್ಕ ವಯಸ್ಸಿನಲ್ಲಿ ತಪ್ಪು ಮಾಡಬೇಡಿ ತಂದೆ- ತಾಯಿ, ಗುರುಗಳ ಮಾತು ಕೇಳಬೇಕು ಎಂದು ಅವರು ಕಿವಿಮಾತು ಹೇಳಿದರು.

ಶಿಕ್ಷಣ ಇಲಾಖೆಯ ಬಿಆರ್‌ಸಿ ಹೊನ್ನತ್ತೆಪ್ಪ ಮಾತ ನಾಡಿ, ಪಂದ್ಯಾವಳಿಯನ್ನು ಶಿಸ್ತು ಬದ್ಧವಾಗಿ, ಗುಣಮಟ್ಟದ ಆಟವನ್ನು ಆಯೋಜಿಸಿರುವುದು ಉತ್ತಮ ಬೆಳವಣಿಗೆ ಆಗಿದೆ. ಮಹಾಭಾರತ ಕಾಲಘಟ್ಟಕಾಲದಲ್ಲಿ ಕೂಡ ಚದುರಂಗ ಜನಪ್ರಿಯವಾಗಿತ್ತು ಎಂದರು.



ಪರ್ಲ್ ಪಬ್ಲಿಕ್ ಶಾಲೆಯ ಗೌರವ ಅಧ್ಯಕ್ಷ ಶಶಿಧರ್ ಪೂಜಾರ್ ಮಾತನಾಡಿ, ಚದುರಂಗ ಆಟದ ಉದ್ದೇಶ ಎದುರಾಳಿ ರಾಜನ ಮೇಲೆ ದಾಳಿ ನಡೆಸಿ ರಾಜನಿಗೆ ತಪ್ಪಿಸಿಕೊಳ್ಳಲು ಯಾವ ಚೌಕಗಳೂ ಇಲ್ಲದ ಹಾಗೆ ಮಾಡುವುದು. ಇದಕ್ಕೆ ಚೆಕ್‌ಮೇಟ್ ಎಂದು ಕರೆಯಲಾಗುತ್ತದೆ. ಚದುರಂಗ ಅದೃಷ್ಟದ ಆಟವಲ್ಲ ಬುದ್ಧಿವಂತಿಕೆಯಿಂದ ಆಡುವ ಆಟವಾಗಿದೆ. ಜಗತ್ತಿನೆಲ್ಲೆಡೆ ಅಸ್ತಿತ್ವದಲ್ಲಿರುವ ಈ ಆಟದ ಮೂಲ ಯಾವುದು ಎಂಬುದರ ಬಗ್ಗೆ ಅನೇಕ ಗೊಂದಲಗಳಿವೆ. ಹೆಚ್ಚಿನವರು ಭಾರತ ಎಂದರೆ, ಇನ್ನು ಕೆಲವರು ಚೀನಾ, ಪರ್ಷಿಯಾ ಎಂದು ವಾದಿಸುತ್ತಾರೆ ಎಂದರು. ಪರ್ಲ್ ಪಬ್ಲಿಕ್ ಶಾಲೆ ಪ್ರಾಂಶುಪಾಲರಾದ ಸುಮಾ ಉಪ್ಪಿನ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಪ್ರಕೃತಿ ವಿದ್ಯಾ ಸಂಸ್ಥೆ ಅಧ್ಯಕ್ಷ ಮಂಜುನಾಥ್ ಪೂಜಾರ್, ಉಪಾಧ್ಯಕ್ಷ ನಾಗೇಶ್ ಉಪ್ಪಿನ್, ಕಾರ್ಯದರ್ಶಿ ಮಾಲತೇಶ್ ಚಳಗೇರಿ, ಖಜಾಂಚಿ ಬಸವರಾಜ್ ಹುಲ್ಲತ್ತಿ, ಕಾರ್ಯನಿರ್ವಾಹಕ ನಿರ್ದೇಶಕ ಚೆನ್ನೇಶ್, ಬಣಕಾರ್, ನಿರ್ದೇಶಕ ವಿರೂಪಾಕ್ಷಪ್ಪ, ಸಂಗೀತ ಶಿಕ್ಷಕ ಬಸವರಾಜ ಬಂಡಾರಿ ಸೇರಿದಂತೆ ಇತರರು ಇದ್ದರು

## ಸಿದ್ದರಾಮಯ್ಯಗೆ ಶಾಲು ತೊಡಿಸಲು ವೇದಿಕೆಗೆ ಜಿಗಿದ ಯುವಕನ ವಶ

ಬೆಂಗಳೂರು, ಸೆ. 15 - ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದ ಕಾರ್ಯಕ್ರಮದಲ್ಲಿ ಭದ್ರತಾ ಲೋಪವಾಗಿದ್ದು, ಸಿದ್ದರಾಮಯ್ಯ ಇದ್ದ ಕಾರ್ಯಕ್ರಮದ ವೇದಿಕೆ ಮೇಲೆ ಯುವಕನೋರ್ವ ಜಿಗಿದ ಪರಿಣಾಮ ಕೆಲ ಕ್ಷಣ ಆತಂಕ ಸೃಷ್ಟಿಯಾಗಿತ್ತು.

ವಿಧಾನಸೌಧದ ಮುಂಭಾಗ ನಡೆಯುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಕಾರ್ಯಕ್ರಮದಲ್ಲಿ ಈ ಘಟನೆ ನಡೆದಿದೆ. ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಯುವಕನೊಬ್ಬ ಏಕಾಏಕಿ ವೇದಿಕೆ ಮೇಲೆ ಜಿಗಿದು ಸಿದ್ದರಾಮಯ್ಯ ಅವರ ಕಡೆ ಧಾವಿಸಿ ಶಾಲು ಹೊದಿಸಲು ಪ್ರಯತ್ನಿಸಿದ್ದಾನೆ. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಕೂಡಲೇ ಆ ಯುವಕನನ್ನು ವಶಕ್ಕೆ ಪಡೆದಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಈದ್ ಮಿಲಾದ್ ಮೆರವಣಿಗೆ


ಈದ್ ಮಿಲಾದ್ ಹಬ್ಬದ ಅಂಗವಾಗಿ ಪಟ್ಟದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಹಜರತ್ ಸೈಯ್ಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ನಂತರ ಈದ್ ಮಿಲಾದ್‌ನ ಬೃಹತ್ ಮೆರವಣಿಗೆ ಆರಂಭವಾಗಿ ಮುಖ್ಯರಸ್ತೆ, ಪೇಟೆ ಬೀದಿ, ಜಿಗಳೇರ ಕೇರಿ, ನೀರಾವರಿ ಇಲಾಖೆ ಕಛೇರಿ, ಪೊಲೀಸ್‌ಠಾಣೆ ಮುಂಭಾಗದ ರಸ್ತೆ ಮೂಲಕ ಶಾದಿ ಮಹಲ್ ತಲುಪಿ ಮುಕ್ತಾಯಗೊಳ್ಳಲಿದೆ.

## ಪ್ರಸಕ್ತ ಅವಧಿಯಲ್ಲಿ 'ಒಂದು ದೇಶ - ಒಂದು ಚುನಾವಣೆ' ಯೋಜನೆ ಜಾರಿಗೆ

ನವದೆಹಲಿ, ಸೆ. 15 - ಬಿಜೆಪಿ ನೇತೃತ್ವದ ಸರ್ಕಾರ ಪ್ರಸಕ್ತ ಅವಧಿಯಲ್ಲಿ 'ಒಂದು ದೇಶ - ಒಂದು ಚುನಾವಣೆ' ಯೋಜನೆ ಜಾರಿಗೆ ತರಲಿದೆ ಎಂದು ಮೂಲಗಳು ತಿಳಿಸಿವೆ.

ನರೇಂದ್ರ ಮೋದಿ ಸರ್ಕಾರದ ಮೂರನೇ ಅವಧಿಯ ಮೊದಲ ನೂರು ದಿನಗಳು ಪೂರ್ಣಗೊಂಡಿವೆ. ಆಡಳಿತಾರೂಢ ಮೈತ್ರಿಕೂಟ ದಲ್ಲಿ ಈಗಿರುವಂತೆಯೇ ಸಮನ್ವಯತೆ ಮುಂದು ವರೆಯಲಿದೆ ಎಂದು ಮೂಲಗಳು ಹೇಳಿವೆ. ಪ್ರಸಕ್ತ ಅವಧಿಯಲ್ಲಿ ಒಂದು ದೇಶ ಒಂದು ಚುನಾವಣೆ ಜಾರಿಗೆ ಬರಲಿದೆ. ಈ ಸುಧಾರಣೆಗೆ ಪಕ್ಷಾತೀತವಾಗಿ ಬೆಂಬಲ ದೊರೆಯಲಿದೆ ಎಂದು ಮೂಲಗಳು ವಿಶ್ವಾಸ ವ್ಯಕ್ತಪಡಿಸಿವೆ. ಕಳೆದ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಪ್ರಧಾನಿ ಮೋದಿ ಅವರು ಒಂದು ದೇಶ ಒಂದು ಚುನಾವಣೆ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದರು. ದೇಶದ ಪ್ರಗತಿಗೆ ಪದೇ ಪದೇ ಚುನಾವಣೆ ನಡೆಸುವುದು ಅಡ್ಡಿಯಾಗುತ್ತದೆ ಎಂದವರು ಹೇಳಿದ್ದರು. ಏಕಕಾಲಕ್ಕೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿ ಹಾಗೂ ಕಾನೂನು ಆಯೋಗಗಳು ಪ್ರತ್ಯೇಕ ವರದಿ ನೀಡಿವೆ.

## ನಗರದಲ್ಲಿ ನಾಳೆ ಶ್ರೀ ವಿಶ್ವಕರ್ಮ ಮಹೋತ್ಸವ



ದಾವಣಗೆರೆ, ಸೆ.15- ವಿಶ್ವಕರ್ಮ ಸಮಾಜದ ವತಿಯಿಂದ ನಾಡಿದ್ದು ದಿನಾಂಕ 17ರಂದು ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ 'ಭಗವಾನ್ ಶ್ರೀ ವಿಶ್ವಕರ್ಮ ಮಹೋತ್ಸವ ನಡೆಯಲಿದೆ' ಎಂದು ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ವಿ. ಶಿವಾನಂದ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 5.30ಕ್ಕೆ ವಿಶ್ವಕರ್ಮ ಹೋಮ ನಡೆಯಲಿದ್ದು, 10ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಮೇಯರ್ ವಿನಾಯಕ ಪೈಲ್ವಾನ್, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹಾಗೂ ಜಿ.ಪಂ. ಸಿಇಓ ಸುರೇಶ್ ಬಿ. ಇಟ್ನಾಳ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮಧ್ಯಾಹ್ನ 12ಕ್ಕೆ ಕುಂಭೋತ್ಸವ, ಸ್ತಬ್ಧ ಚಿತ್ರ ಹಾಗೂ ಕಲಾ ತಂಡಗಳೊಂದಿಗೆ ಭಗವಾನ್ ವಿಶ್ವಕರ್ಮ ಮೂರ್ತಿಯ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು.

ಇದೇ ವೇಳೆ ಅವರು, ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಲ್ಲಿ ವಿಶ್ವಕರ್ಮ ಸಮಾಜದವರಿಗೆ ಟ್ರಸ್ಟಿ ಹಾಗೂ ಸದಸ್ಯರಾಗಿ ನಿಯೋಜಿಸಿಕೊಳ್ಳಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು. ಅಧ್ಯಕ್ಷ ಬಸಾಪುರದ ನಾಗೇಂದ್ರಾಚಾರ್, ಗೌರವಾಧ್ಯಕ್ಷ ಎನ್. ಪೂರ್ವಾಚಾರ್, ಉಪಾಧ್ಯಕ್ಷ ಬಿ.ಸಿದ್ದಾಚಾರ್, ಬಸವರಾಜಾಚಾರ್ ಸುದ್ದಿಗೋಷ್ಠಿಯಲ್ಲಿದ್ದರು.


## 15ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಸುಶೀಲಮ್ಮ ಟಿ. ಬಸವರಾಜಪ್ಪ**

ಯಕ್ಕನಹಳ್ಳಿ.

ದಾವಣಗೆರೆ ಜಿಲ್ಲಾ ಪಂಚಾಯ್ತಿ ಸದಸ್ಯರು, ಕುಂದೂರು ಕ್ಷೇತ್ರ

ಜನನ : 25.12.1958 - ಮರಣ : 16.09.2009

ನೀವು ನಮ್ಮನ್ನಗಲಿ ಇಂದಿಗೆ ಹದಿನೈದು ವರ್ಷಗಳಾದವು. ಸದಾ ನಿಮ್ಮ ಸವಿನೆನಪಿನಲ್ಲಿರುವ.....

ದಿ|| ಶ್ರೀಮತಿ ಸಿದ್ದಮ್ಮ, ದಿ|| ತಿಮ್ಲಾಪುರದ ಸಿದ್ದಪ್ಪನವರ ಮಕ್ಕಳು, ಸೊಸೆಯಂದಿರು ಹಾಗೂ ಅಳಿಯಂದಿರು, ಮೊಮ್ಮಕ್ಕಳು.

**ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್**

ಯಕ್ಕನಹಳ್ಳಿ ಮತ್ತು ಮಲೇಬೆನ್ನೂರು ಹಾಗೂ ಕುಂಬಳೂರು

ದಿ|| ಶ್ರೀ ಹೊಸಮನಿ ವೀರಭದ್ರಪ್ಪ ಮತ್ತು ಸಹೋದರರು ಹಾಗೂ ಹೊಸಮನಿ ವಂಶಸ್ಥರು, ಬೆಳ್ಳೂಡಿ.



## 11ನೇ ವರ್ಷದ ಪುಣ್ಯಸ್ಮರಣೆ



**ದೇಹದಾನಿ ಆರ್. ಪ್ರಮೀಳಮ್ಮ**

ಸ್ಟ್ಯಾಂಪ್ ವೆಂಡರ್

ನೀವು ನಮ್ಮನ್ನಗಲಿ ಇಂದಿಗೆ (16.09.2024) ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿರುವ.

ಮಗಳು : ಶ್ರೀಮತಿ ಗೀತಾ ಯು.ಆರ್., ಡಿಸಿಸಿ ಬ್ಯಾಂಕ್, ದಾವಣಗೆರೆ.

ಅಳಿಯ : ಹೆಚ್. ಯು.ರಾಮಸ್ವಾಮಿ, ಸಹ ಶಿಕ್ಷಕರು

ಡಿ.ಕೆ. ಸಂಗಮೇಶ್ ಎಲಿಗಾರ್, ಸ್ಟ್ಯಾಂಪ್ ವೆಂಡರ್, ಶ್ರೀಮತಿ ಶಾಂತ ಶಿವರಾಜ ಗವಾಯಿ


## ಕೊಕ್ಕನೂರು ಗ್ರಾಮದ ನಿವೃತ್ತ ಶಿಕ್ಷಕಿ ಅಂಗಡಿ ಚಂದ್ರಮ್ಮ ನಿಧನ



ಹರಿಹರ ತಾ. ಕೊಕ್ಕನೂರು ಗ್ರಾಮದ ವಾಸಿ ನಿವೃತ್ತ ಶಿಕ್ಷಕರಾದ ದಿ. ಅಂಗಡಿ ಕೆ.ವಿ. ಪಂಚಾಕ್ಷರಪ್ಪನವರ ಧರ್ಮಪತ್ನಿ ಹಾಗೂ ನಿವೃತ್ತ ಶಿಕ್ಷಕಿ **ಶ್ರೀಮತಿ ಅಂಗಡಿ ಚಂದ್ರಮ್ಮ** (70 ವರ್ಷ) ಇವರು ದಿನಾಂಕ 15.09.2024ರ ಭಾನುವಾರ ಸಂಜೆ 4.45ಕ್ಕೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.09.2024ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಕೊಕ್ಕನೂರು ಗ್ರಾಮದಲ್ಲಿ ನೆರವೇರಲಿದೆ.

**ದುಃಖತಪ್ತರು : ಅಂಗಡಿ ವಂಶಸ್ಥರು, ಕೊಕ್ಕನೂರು ಹಾಗೂ ಬಂಧು ಮಿತ್ರರು.**

# ಸಹಸ್ರಾರ್ಜುನ ಸಹಕಾರಿಗೆ 28 ಲಕ್ಷ ರೂ. ಲಾಭ

ಹರಿಹರ, ಸೆ.15- ಷೇರುದಾರರು ಮತ್ತು ಆಡಳಿತ ಮಂಡಳಿಯ ಉತ್ತಮ ಸಹಕಾರದಿಂದಾಗಿ ಈ ಬಾರಿ 28 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ. 13 ರಷ್ಟು ಡಿವಿಡೆಂಡ್ ನೀಡಲಾಗುವುದು ಎಂದು ಸಹಸ್ರಾರ್ಜುನ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಆರ್.ಎಂ ರಾಘವೇಂದ್ರ ಮೆಹರ್ವಾಡೆ ಹೇಳಿದರು.



ನಗರದ ಕಾಟ್ವೆ ಭವನದಲ್ಲಿ ನಿನ್ನೆ ನಡೆದ ಸೊಸೈಟಿಯ 25 ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಷೇರುದಾರರಿಗೆ ಶೇ. 13 ಡಿವಿಡೆಂಡ್ : ಅಧ್ಯಕ್ಷ ರಾಘವೇಂದ್ರ ಮೆಹರ್ವಾಡೆ ಘೋಷಣೆ**

ಸೊಸೈಟಿಯು 1373 ಸದಸ್ಯರು ಮತ್ತು 261 ಸಹ ಸದಸ್ಯರನ್ನು ಹೊಂದಿದ್ದು, 91.38 ಕೋಟಿ ರೂ. ಷೇರು ಬಂಡವಾಳ ಹೊಂದಿದೆ. 4.92 ಕೋಟಿ ಠೇವಣಿ ಸಂಗ್ರಹವಾಗಿದ್ದು. 6.90 ಕೋಟಿ ರೂ. ಸಾಲವನ್ನು ನೀಡಲಾಗಿದೆ. 20.90 ಲಕ್ಷ ರೂಪಾಯಿ ಅವಧಿ ಮೀರಿದ ಸಾಲದ ಬಾಕಿ ಇದೆ. ಪ್ರಗತಿಯ ಹಾದಿಯಲ್ಲಿ ಸಾಗುತ್ತಿದ್ದು, ಸೊಸೈಟಿ ಏಳಿಗೆಗಾಗಿ ಶ್ರಮಿಸಿರುವ ಎಲ್ಲರಿಗೂ ಧನ್ಯವಾದ ಹೇಳುವುದಾಗಿ ತಿಳಿಸಿದರು. ವಾರ್ಷಿಕ ವರದಿಯನ್ನು ಕಾರ್ಯ ನಿರ್ವಾಹಕರಾದ ಶ್ರೀಮತಿ ನಂದಾ ವಿ. ಕಾಟ್ವೆ ಸಭೆಯಲ್ಲಿ ಮಂಡಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಕೃಷ್ಣಸಾ ಆರ್. ಪೂಜಾರಿ, ನಿರ್ದೇಶಕರಾದ ಬಿ. ರೇವಣಸಾ, ರಮೇಶ್ ಎಸ್ ಕಾಟ್ವೆ, ಸೇವಂತಿ ಕೆ. ಭೂತೆ, ನಾರಾಯಣ ಸಾ ಗುಜರಾತಿ, ತುಳಜಾರಾಮ್ ಎಂ., ಕು.ಶೋಭಾದೇವಿ ವಿ.ಎಂ., ಮೋಹನ್ ಟಿ.ಎಂ., ವಿಠಲ್ ಎಂ. ಭೂತೆ, ಶಶಿಧರ್ ಡಿ. ಆನ್ವೇರಿ, ಎನ್.ಟಿ. ಪರುಶುರಾಮ್, ಗಣ್ಯರಾದದ ಕೃಷ್ಣ ಸಾ ಭೂತೆ, ಪರುಶುರಾಮ್ ಕಾಟ್ವೆ, ಮನೋಹರ ಸಾ. ಸೊಳಂಕಿ, ತುಳಜಪ್ಪ ಭೂತೆ, ಆಡಿಟರ್ ಉಮೇಶ್ ಶೆಟ್ಟಿ, ಸಿಬ್ಬಂದಿ ವರ್ಗದ ಅನಿತಾ ಎಸ್. ಎಂ., ಅನಿಲ್ ಕುಮಾರ್ ಹೆಚ್. ಪಿ., ರಾಕೇಶ್ ವಿ.ಎಂ., ಸೂರಜ್ ಇ, ಪಿಗ್ಮಿ ಸಂಗ್ರಾಹಕರಾದ ಬಸವರಾಜ್ ಎಲ್.ಹೆಚ್., ನಂದಕುಮಾರ್ ಎಂ.ಕೆ, ಪ್ರಶಾಂತ್ ಕುಮಾರ್ ಬಿ., ರಘುವೀರ್ ಎನ್.ಕೆ ಇತರರು ಹಾಜರಿದ್ದರು.

ನಂದಾ ವಿ ಕಾಟ್ವೆ ಸ್ವಾಗತಿಸಿದರು. ನಿರೂಪಣೆ ಅನಿಲ್ ಪವಾರ್ ನಿರೂಪಿಸಿದರು. ಉಪಾಧ್ಯಕ್ಷ ಕೃಷ್ಣ ಸಾ ಪೂಜಾರಿ ವಂದಿಸಿದರು.

## ಇಂದು ಮೆಕ್ಕೆಜೋಳ ವರ್ತಕರ ಸಭೆ

ಕರ್ನಾಟಕ ಮೆಕ್ಕೆಜೋಳ ವರ್ತಕರ ಸಂಘದ ವಾರ್ಷಿಕ ಮಹಾಸಭೆಯು ಇಂದು ಬೆಳಗ್ಗೆ 11ಕ್ಕೆ ಸಂಘದ ಅಧ್ಯಕ್ಷ ಪಿ.ಡಿ.ಶಿರೂರು ಅಧ್ಯಕ್ಷತೆಯಲ್ಲಿ ಶಿವಮೊಗ್ಗದ ಎಪಿಎಂಸಿ ಯಾರ್ಡ್‌ನಲ್ಲಿ ನಡೆಯಲಿದೆ.

# ವಾರ ಭವಿಷ್ಯ

**ದಿನಾಂಕ : 15.09.2024 ರಿಂದ 21.09.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಎಲ್ಲಾ ವಿಚಾರಕ್ಕೂ ತಂತ್ರಜ್ಞಾನ ಬಳಸದೇ ಜನ ಸಂಪರ್ಕ ಸಾಧ್ಯವಿಲ್ಲ ಎಂಬುದನ್ನು ಮರೆಯಬೇಡಿ, ಬರಬೇಕಾಗಿರುವ ಬಾಕಿ ಹಣವು ಇಷ್ಟರಲ್ಲೇ ಸಂದಾಯವಾಗಲಿದೆ. ವ್ಯವಹಾರದಲ್ಲಿ ಬಳಕೆಯಾಗಲಿರುವ ಭಾಷೆಯ ಮೇಲೆ ಹಿಡಿತವಿರಲಿ, ಪ್ರತಿಯೊಂದು ಕೆಲಸ ಕಾರ್ಯಗಳಿಗೆ ಪರಾವಲಂಬಿಗಳಾಗ ಬೇಡಿ, ದೊಡ್ಡ ಮೊತ್ತದ ಖರೀದಿಯಲ್ಲಿ ಮೋಸ ಹೋಗುವ ಸಂಭವವಿದೆ. ಯಾವುದೇ ದೂರ ದೂರುಗಳಿಗೆ ಪ್ರಯಾಣ ಮಾಡುವ ಮೊದಲು ಅಲ್ಲಿಯ ಸ್ಥಿತಿ-ಗತಿಗಳನ್ನರಿಯಿರಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಹಳೇ ತಲೆಮಾರಿನ ವ್ಯಾಪಾರ ವ್ಯವಹಾರಗಳನ್ನೇ ಮುಂದುವರೆಸುವುದು ಉತ್ತಮವಾದರೂ ಕಾಲಕ್ಕೆ ತಕ್ಕಂತೆ ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಿ ಕೊಳ್ಳುವುದು ಮೇಲು. ಉನ್ನತಾಧ್ಯಯನ ಮಾಡಿರುವವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇದು ಸಕಾಲವಾಗಿದೆ, ಕೌಟುಂಬಿಕ ವಿಚಾರದಲ್ಲಿ ಯಾವುದೇ ಸಣ್ಣ-ಸಣ್ಣ ವಿಚಾರಗಳನ್ನೂ ಕಡೆಗಣಿಸುವಂತಿಲ್ಲ ಎಂಬುದನ್ನು ಮರೆಯಬೇಡಿ. ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರಲಿದ್ದು, ಅದಕ್ಕೆ ಬೇಕಾದ ಸಿದ್ಧತೆ ಭರದಿಂದಸಾಗಲಿದೆ. ಸೋಮ-ಗುರು-ಶುಕ್ರ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ನಿಶ್ಚಿತ ವಿವಾಹ ಕಾರ್ಯಗಳಿಗೆ ವಡವೆ ವಸ್ತ್ರಗಳ ಖರೀದಿ ಜೋರಾಗಿಯೇ ನಡೆಯಲಿದೆ, ವಿದ್ಯಾರ್ಥಿಗಳ ವಿಚಾರದಲ್ಲಿ ಹೇಳುವುದಾದರೆ ಪರೀಕ್ಷಾ ಫಲಿತಾಂಶವು ಅವರ ನಿರೀಕ್ಷೆಗೆ ಮೀರಿಬರಲಿದ್ದು, ಅದು ಅವರಿಗೆ ಅಚ್ಚರಿ ತರಲಿದೆ, ಸಧ್ಯದ ಪರಿಸ್ಥಿತಿಯಲ್ಲಿ ಯಾವುದೇ ವ್ಯವಹಾರದಲ್ಲಿ ಬಂಡವಾಳ ಹೂಡು ವುದು ಸೂಕ್ತವಲ್ಲ. ದಂಪತಿಗಳ ಮಧ್ಯದಲ್ಲಿದ್ದ ಭಿನ್ನಾಭಿಪ್ರಾಯಗಳು ದೂರವಾಗಿ, ಸಾಮರಸ್ಯ ಮೂಡಲಿದೆ, ಆದಾಯದ ಮೂಲದಲ್ಲಿ ಕೊರತೆ ಕಂಡುಬಂದರೂ ಚಿಂತೆಬೇಡ. ಭಾನು-ಮಂಗಳ-ಬುಧ-ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಮಕ್ಕಳ ವಿಷಯದಲ್ಲಿದ್ದ ಭ್ರಮಾಲೋಕದಿಂದ ಹೊರಬಂದು ವಾಸ್ತವಿಕದ ಕಡೆ ಯೋಚಿಸುವುದನ್ನು ಕಲಿಯಿರಿ. ಕೌಟುಂಬಿಕ ರಹಸ್ಯಗಳು ನಿಮ್ಮವರಿಂದಲೇ ಬೇರೆಯವರಿಗೆ ವಿಷಯ ತಿಳಿಯಲಿದೆ. ಪ್ರೇಮಿಗಳು ಪರಸ್ಪರ ಅನುಮಾನ ಪಡುವುದರಿಂದ ವಿಶ್ವಾಸಕ್ಕೆ ಧಕ್ಕೆ, ಆದಾಯದ ಮೂಲವನ್ನು ಹೆಚ್ಚಿಸಿ ಕೊಳ್ಳಲು ಹರಸಾಹಸ ಪಡುವಿರಿ, ಆದರೆ ನೆಮ್ಮದಿಯ ಜೀವನಕ್ಕೇನೂ ಕೊರತೆಯಿಲ್ಲ, ಆಸ್ತಿಗೆ ಸಂಬಂಧಪಟ್ಟ ವಿಚಾರದಲ್ಲಿ ಕೋರ್ಟು ಕಛೇರಿ ಅಲೆಯಬೇಕಾಗ ಬಹುದು ಗೋ ಸೇವೆಮಾಡಿ. ಭಾನು-ಸೋಮ-ಬುಧ-ಶುಭದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸರ್ಕಾರಿ ನೌಕರರಿಗೆ ಸಹೋದ್ಯೋಗಿಗಳ ಪಿತೂರಿಯಿಂದಾಗಿ ಮೇಲಾಧಿಕಾರಿಗಳ ಕೆಂಗಣ್ಣಿಗೆ ಗುರುಯಾಗಬೇಕಾಗಬಹುದು, ಅತಿಯಾದ ಭೋಜನ ಕೂಟ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ, ಹೊಸ ಯೋಜನೆಗಳಿಗೆ ಬರಬಹುದಾದ ಯಾವುದೇ ವಿಘ್ನಗಳಿದ್ದರೂ ಅದು ಕೂಡಲೇ ಪರಿಹಾರವಾಗಲಿದೆ, ಹೊಸದಾಗಿ ನೌಕರಿಗೆ ಸೇರಿರುವ ಯುವಕರಿಗೆ ಕೆಲಕಾಲ ಕರ್ತವ್ಯದಲ್ಲಿ ಗೊಂದಲಕ್ಕೆ ಒಳಗಾಗುವರು ಆದಾಯದ ಮೂಲದಲ್ಲಿ ಹೆಚ್ಚಳ ಕಾಣಲಿದೆ. ಭಾನು-ಬುಧ-ಗುರು-ಶುಭದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ರಾಜಕೀಯಕ್ಕೆ ಸೇರುವ ಮೊದಲು ಕೌಟುಂಬಿಕ ಭದ್ರತೆ ಬಗ್ಗೆ ಯೋಚಿಸುವುದು ಮೇಲು, ನಿಮ್ಮ ಕೆಲವು ನಿರ್ಧಾರಗಳಿಗೆ ಹಿರಿಯರ ಸಮ್ಮತಿ ದೊರೆಯದೇ ಹೋಗಲಿದೆ. ವಿದ್ಯಾವಂತರಾದ ಅದರಲ್ಲೂ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಿಣಿತರಾದವರು ಕೆಲವು ಉತ್ತಮ ಅವಕಾಶಗಳನ್ನು ಕಳೆದು ಕೊಳ್ಳುವ ಸಂಭವವಿದೆ. ಆತ್ಮೀಯ ಬಂಧುಗಳೊಬ್ಬರ ಅನಾರೋಗ್ಯ ವಿಚಾರ ನಿಮ್ಮನ್ನು ಚಿಂತೆಗೀಡುಮಾಡಲಿದೆ. ಮಕ್ಕಳಿಂದ ಹೆಚ್ಚಿನ ನಿರೀಕ್ಷೆಬೇಡ.ಕುಲದೇವತಾರಾಧನೆಮಾಡಿ. ಮಂಗಳ-ಬುಧ-ಶುಕ್ರ-ಶುಭದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಯುವಕರು ಮಾಡಲಿರುವ ಕೆಲವು ಅಪಸವ್ಯಗಳಿಂದ ಮನೆಯ ಹಿರಿಯರು ಮುಜುಗರಕ್ಕೆ ಒಳಗಾಗುವರು. ಸಮಸ್ಯೆಗಳನ್ನು ಉಪಾಯದಿಂದ ಎದುರಿಸುವುದನ್ನು ಕಲಿಯಿರಿ. ಉನ್ನತಾಧ್ಯಯನಕ್ಕೆ ಬೇಕಾಗುವ ಆರ್ಥಿಕ ನೆರವು ಹಣಕಾಸು ಸಂಸ್ಥೆಗಳಿಂದ ಸಿಗಲಿದೆ, ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕಷ್ಟೆ. ಆದಾಯದ ಮೂಲದಲ್ಲಿ ಸಾಕಷ್ಟು ಹೆಚ್ಚಳವಾಗಲಿದ್ದು, ಉಳಿತಾಯದ ಬಗ್ಗೆ ಯೋಚಿಸಬಹುದು, ಗುರುಗಳನ್ನು ಆರಾಧಿಸಿ. ಬುಧ-ಗುರು-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಮಕ್ಕಳು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಪಡೆದು ಪೋಷಕರಿಗೆ ಸಂತಸ ತರುವರು, ಈ ಹಿಂದೆ ಹೊಸ ಯೋಜನೆಗಳಲ್ಲಿ ಹೂಡಿದ್ದ ಬಂಡವಾಳವು ಇನ್ನು ಮುಂದೆ ಲಾಭ ತರಲಿದೆ. ನಿಮ್ಮಲ್ಲಿ ಎಷ್ಟೇ ಉತ್ಸಾಹವಿದ್ದರೂ ಹಳೇ ಖಾಯಿಲೆಗಳು ನಿಮ್ಮನ್ನು ಮತ್ತೆ ಮತ್ತೆ ಬಾಧಿಸಲಿವೆ. ಸಾಧ್ಯವಾದಷ್ಟು ವೈದ್ಯಕೀಯ ಚಿಕಿತ್ಸೆಯಲ್ಲಿರುವುದು ಮೇಲು, ಮಾಡಲಿರುವ ತೀರ್ಥಯಾತ್ರೆ ತುಸು ಕಷ್ಟಕರವಾದರೂ ಜ್ಞಾಪಕಾರ್ಹವಾಗಿರುತ್ತದೆ. ವೈಕ್ತಿಗತ ಜೀವನವು ತೃಪ್ತಿದಾಯಕವಾಗಲಿದೆ. ಗುರುಗಳನ್ನು ಸಂದರ್ಶಿಸಿರಿ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಕುಸಿಯುತ್ತಿರುವ ಅದಾಯ ನಿಮ್ಮನ್ನು ದುಡಿಮೆಯತ್ತ ಒಯ್ಯಲಿದೆ, ಇದು ಒಂದು ರೀತಿಯಲ್ಲಿ ಉತ್ತಮವೆಂದೇ ಹೇಳಬಹುದು, ರಾಜಕಾರಣಿಗಳಿಗೆ ಅವರ ಹಿಂಬಾಲಕರಿಂದಾದ ಎಡವಟ್ಟಿನಿಂದಾಗಿ ಜನಪ್ರಿಯತೆ ಕಡಿಮೆಯಾಗಬಹುದು. ಉನ್ನತಾಧ್ಯಯನಕ್ಕೆ ಯತ್ನಿಸುವವರಿಗೆ ಸಾಮಾಜಿಕ ಬೆಂಬಲ ದೊರೆಯಲಿದೆ. ಪಾಲುದಾರಿಕೆ ವ್ಯವಹಾರದಲ್ಲಿ ಲಾಭಾಂಶ ಪಡೆಯಲು ತುಸು ಶ್ರಮ ಪಡಬೇಕಾದೀತು. ಚಿಕ್ಕಮಕ್ಕಳ ಆರೋಗ್ಯದ ವಿಚಾರದಲ್ಲಿ ಹೆಚ್ಚಿನ ಗಮನಕೊಡ ಬೇಕಾಗಬಹುದು. ಅಧ್ಯಾಪಕ ವರ್ಗದರಿಗೆ ಉತ್ತಮ ಆದಾಯ ವಾಗಲಿದೆ. ಅನ್ನದಾನ ಮಾಡುವುದು ಮೇಲು. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವ್ಯವಹಾರದಲ್ಲಿ ಚತುರರಾದ ನೀವು ಯಾವುದೇ ಕಾರಣಕ್ಕೂ ಬರಬೇಕಾಗಿರುವ ಲಾಭವನ್ನು ಬಿಡುವುದಿಲ್ಲ. ಖಾಸಗಿ ಕಂಪನಿಯಲ್ಲಿರುವ ನೌಕರರಿಗೆ ಮೇಲಾಧಿಕಾರಿಗಳಿಂದ ಕರ್ತವ್ಯದಲ್ಲಿ ಹೆಚ್ಚಿನ ನಿಗಾವಹಿಸುವಂತೆ ನೋಟೀಸ್ ಪತ್ರಬರಲಿದೆ. ಕೃಷಿಕ ಮಿತ್ರರಿಗೆ ಹೊಲ-ಗದ್ದೆಗಳಲ್ಲಿ ಕೆಲಸಮಾಡಿಸಲು ಕಾರ್ಮಿಕರ ಸಮಸ್ಯೆ ಎದುರಾಗಲಿದೆ. ಮಹಿಳೆಯರು ಆದಾಯಕ್ಕೆ ತಕ್ಕಂತೆ ಮನೆವಾರ್ತೆ ನೊಡಿಕೊಳ್ಳುವುದು ಮೇಲು, ಅಪರೂಪಕ್ಕೆ ಅಥಿತಿಗಳ ಆಗಮನವಾಗಲಿದೆ. ಮಂಗಳ-ಬುಧ-ಶನಿ-ಶುಭದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಎಲ್ಲರ ಕಣ್ಣುಕುಕ್ಕುವಂತೆ ಆದಾಯವಿದ್ದರೂ ಅದಕ್ಕೆ ಸರಿಯಾಗಿ ಖರ್ಚುಯಿರುವುದರಿಂದ ಉಳಿತಾಯದ ಮಾತು ದೂರವಾಗಲಿದೆ.ಆಸ್ತಿಗೆ ಸಂಬಂಧಿಸಿದಂತೆ ಸೋದರನೊಂದಿಗಿದ್ದ ಮನಸ್ತಾಪವು ಬಗೆಹರಿಯಲಿದೆ, ವೈಯುಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಹಿರಿಯರ ಅಣತೆಯಂತೆ ನಡೆಯುವುದರಲ್ಲೇ ನಿಮ್ಮ ಹಿತವಡಗಿದೆ. ರಕ್ಷಣಾ ಇಲಾಖೆಯಲ್ಲಿ ಕೆಲಸಮಾಡುವವರಿಗೆ ಬಿಡುವಿಲ್ಲದ ಕೆಲಸವಾಗಲಿದೆ, ಕುಲದೇವತಾರಾಧನೆಯನ್ನು ಮಾಡುವಿರಿ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ, 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಹೊಸದಾಗಿ ವರ್ಗವಾಗಿ ಹೋದ ಸ್ಥಳದಲ್ಲಿ ಅನುಕೂಲಕರ ವಾತಾವರಣ ಕಂಡುಬರಲಿದೆ, ಮುಂದೆ ಹೋಗಿದ್ದ ಮಗಳ ಮದುವೆ ವಿಚಾರ ಮತ್ತೆ ಮುನ್ನಲೆಗೆ ಬರಲಿದೆ, ಅನಿರೀಕ್ಷಿತ ಪ್ರಸಂಗವೊಂದರಿಂದ ವೈದ್ಯಕೀಯ ವೆಚ್ಚವು ಹೆಚ್ಚಲಿದೆ, ಇದರಿಂದಾಗಿ ತುಸು ಆರ್ಥಿಕ ಹೊರೆಯಾಗಲಿದೆ, ಸ್ನೇಹಿತನ ಮಗನ ವಿದ್ಯಾಭ್ಯಾಸಕ್ಕೆ ಸಾಮಾಜಿಕ ನೆರವು ನಿಮ್ಮಿಂದ ದೊರೆಯಲಿದೆ, ವ್ಯಾಪಾರಿ ಗಳು ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ತಮ್ಮ ನೌಕರರಿಗೆ ಎಚ್ಚರಿಸು ವುದು ಮೇಲು. ಅನ್ನದಾನಮಾಡಿ. ಭಾನು-ಗುರು-ಶನಿ-ಶುಭ ದಿನಗಳು.

**ವಿಶೇಷ ದಿನಗಳು :** ದಿನಾಂಕ: 17.9.2024 ನೇ ಮಂಗಳವಾರ ಅನಂತಚತುರ್ದಶೀ, ದಿನಾಂಕ: 18.9.2024 ನೇ ಬುಧವಾರ ಅನಂತನಹುಣ್ಣಿಮೆ. ಸನ್ಯಾಸಿನಾಂ ಚಾತುರ್ಮಾಸ್ಯವ್ರತ ಸಮಾಪ್ತಿ.

## ಚನ್ನಗಿರಿಯಲ್ಲಿ ಲೋಕಾಯುಕ್ತರಿಂದ ಅಹವಾಲು

ಚನ್ನಗಿರಿ, ಸೆ.15- ಪ್ರವಾಸಿ ಮಂದಿರದಲ್ಲಿ ನಾಡಿದ್ದು ದಿನಾಂಕ 17ರ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ದಾವಣಗೆರೆ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

# ರಂಗಾಯಣಗಳ ನಾಟಕ ತರಬೇತಿ ಕೇಂದ್ರ ದಾವಣಗೆರೆಯಲ್ಲೇ ಆಗಲಿ

**ರಂಗಾಯಣ ಮಾಜಿ ನಿರ್ದೇಶಕ ಬಸವಲಿಂಗಯ್ಯ**

ದಾವಣಗೆರೆ, ಸೆ.15- ರಾಜ್ಯದ ಎಲ್ಲಾ ರಂಗಾಯಣಗಳ ನಾಟಕ ತರಬೇತಿ ಕೇಂದ್ರ ದಾವಣಗೆರೆಯಲ್ಲಿಯೇ ಆಗಬೇಕು ಎಂದು ಹಿರಿಯ ರಂಗಕರ್ಮಿ ಹಾಗೂ ರಂಗಾಯಣದ ಮಾಜಿ ನಿರ್ದೇಶಕ ಬಸವಲಿಂಗಯ್ಯ ಆಶಯ ಪಟ್ಟರು.

ವೃತ್ತಿ ರಂಗಭೂಮಿ ರಂಗಾಯಣದ ವತಿಯಿಂದ ನಗರದ ಬಾಪೂಜಿ ಸಭಾಂಗಣದಲ್ಲಿ ಇಂದು ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ದಿಕ್ಸೂಚಿ ನುಡಿಗಳನ್ನಾಡಿದರು.

ಇಲ್ಲಿನ ರಂಗಾಯಣಕ್ಕೆ ಲಭಿಸಿದ 10 ಎಕರೆ ಜಾಗದಲ್ಲಿ ಶೀಘ್ರವಾಗಿ ಮ್ಯೂಸಿಯಂ ತಲೆ ಎತ್ತಿ ನಿಲ್ಲಬೇಕಿದ್ದು, ಅಲ್ಲಿ ವೃತ್ತಿ ಕಂಪನಿಯ ತಾರೆಯರ ಚರಿತ್ರೆ ತಿಳಿಸುವ ಯೋಜನೆ ಆಗಬೇಕು ಎಂದು ಹೇಳಿದರು. ರಾಜ್ಯದ 31 ಜಿಲ್ಲೆಗಳ ಲ್ಲಿಯೂ ರಂಗಾಯಣದ ನಾಟಕ ಶಾಲೆ ಪ್ರಾರಂಭವಾಗ ಬೇಕು. ಬೀದರ್‌ನಿಂದ ಚಾಮರಾಜ ನಗರದ ವರೆಗೆ ಹೊಸ-ಹೊಸ ಪ್ರಯೋಗ ಮಾಡುವ ಮೂಲಕ ವೃತ್ತಿ ರಂಗಾಯ ಣವು ಉತ್ತಮ ಸಂದೇಶ ನೀಡಬೇಕು ಎಂದು ಹೇಳಿದರು.

ಹವ್ಯಾಸಿ ರಂಗಭೂಮಿಯ ಪ್ರಯೋಗ ಶೀಲ ವೈಚಾರಿಕತೆ ಹಾಗೂ ವೃತ್ತಿ ರಂಗಭೂಮಿಯ ವೈಭವ ಇವೆರಡನ್ನು ಬೆಸೆದು ಕನ್ನಡ ರಂಗಭೂಮಿಯನ್ನು ಆಧುನಿಕರಣಗೊಳಿಸಲು ರಂಗಾಯಣ ಪ್ರಾರಂಭವಾಯಿತು ಎಂದು ತಿಳಿಸಿದರು.




ರಾಜರು, ಪಾಳೇಗಾರರು ಹಾಗೂ ಜನರ ಸಹಾಯದಿಂದ ವೃತ್ತಿ ಕಂಪನಿ ಬೆಳವಣಿಗೆ ಕಂಡವು. ಈ ಕಂಪನಿಗಳೇ ಹಲವಾರು ಕುಟುಂಬಗಳಿಗೆ ಜೀವನ ಕಟ್ಟಿಕೊಟ್ಟಿದ್ದವು ಎಂದು ಹೇಳಿದರು.

ರಂಗಭೂಮಿಯಲ್ಲಿ ಜಾತಿ, ಧರ್ಮ, ಗಂಡು-ಹೆಣ್ಣು ಎಂಬ ಭೇದ ಭಾವಗಳಿಲ್ಲ ಎಂದ ಅವರು, ರಂಗಭೂಮಿ ವ್ಯವಹಾರ ಆಗಬಾರದು ಎಂದು ತಿಳಿಸಿದರು.

ಪೆಡಲ್ ಹಾರ್ಮೋನಿಯಂ ನುಡಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅವರು, ಈ ವರ್ಷ ಮಳೆ-ಬೆಳೆ ಉತ್ತಮವಾಗಿರುವುದರಿಂದ ನಗರದ ಗಾಜಿನ ಮನೆಯಲ್ಲಿ ಹೆಚ್ಚೆಚ್ಚು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿವ ಚಿಂತನೆ ಮಾಡಿದ್ದೇವೆ ಎಂದು ತಿಳಿಸಿದರು.

ನಾಟಕ ಶೈಲಿಯ ಕಾರ್ಯಕ್ರಮ ವೇದಿಕೆ ಗಮನಿಸಿದ ಜಿಲ್ಲಾಧಿಕಾರಿಗಳು ತಮ್ಮ ಬಾಲ್ಯದ ದಿನಗಳನ್ನು ಸಭಿಕರೊಂದಿಗೆ ಹಂಚಿಕೊಂಡರು.

ನಟ ಅರುಣ ಸಾಗರ್ ಮಾತನಾಡಿ, ವೃತ್ತಿ ರಂಗಭೂಮಿಯ ಜೀವನ ಉದಾತ್ತವಾದುದು, ಈ ನಿಟ್ಟಿನಲ್ಲಿ ಮುಗ್ಧತೆಯೇ ಕಲೆಯ ಮೂಲ ಮಂತ್ರ ಎಂದು ಹೇಳಿದರು. ವೇದಿಕೆ ಮುಂದಿರುವ ಬಣ್ಣದ ಪರಿದೆಯೊಂದೆ ನಾಟಕದ ಪರಿಕರವಲ್ಲ, ವೃತ್ತಿ ರಂಗಭೂಮಿಯ ಪ್ರತಿಯೊಂದು ಅಂಶವು ರಂಗ ಪರಿಕರಗಳಾಗಿವೆ ಎಂದರು.

ಕಂಪನಿ ನಾಟಕಗಳಲ್ಲಿ ಉದ್ಯೋಗಾವಕಾಶಗಳು ದೊಡ್ಡದಾಗಿ ಇರುತ್ತಿದ್ದವು ಎಂದು ಹೇಳಿದರು.

ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ರಂಗಾಯಣದ ವಿಶೇಷಾಧಿಕಾರಿ ರವಿಚಂದ್ರ, ಹಿರಿಯ ರಂಗಕರ್ಮಿ ಎಲ್.ಬಿ. ಶೇಖ್ ಮಾಸ್ತಾರ್, ಪ್ರಕಾಶ್ ಗರುಡಾ, ಶ್ರೀಧರ್ ಹೆಗಡೆ, ಬಸವರಾಜ್, ಶಿವಮೊಗ್ಗಾದ ಡಿ. ಪ್ರಸನ್ನ, ಪತ್ರಕರ್ತರಾದ ಬಾ.ಮ. ಬಸವರಾಜಯ್ಯ, ಬಿ.ಎನ್. ಮಲ್ಲೇಶ್, ವಾಮದೇವಪ್ಪ ಸೇರಿದಂತೆ ಇತರರಿದ್ದರು.

# ವೆಜಿಟಬಲ್ ಪ್ಲಾಂಟ್ ಸಹಕಾರಿಗೆ 28 ಲಕ್ಷ ರೂ. ಲಾಭ

## 'ಎ' ಶ್ರೇಣಿಯಲ್ಲಿ ಮುನ್ನಡೆ : ಸಂಘದ ಅಧ್ಯಕ್ಷ ಬಿ.ಸುರೇಶ್ ಹಾಲೇಕಲ್ಲು ಹರ್ಷ



ದಾವಣಗೆರೆ,ಸೆ.15- 2023-24ನೇ ಸಾಲಿನಲ್ಲಿ 28 ಲಕ್ಷ ರೂ. ನಿವ್ವಳ ಲಾಭಗಳಿಸುವ ಮೂಲಕ ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘವು 'ಎ' ವರ್ಗದ ಶ್ರೇಣಿಯಲ್ಲಿ ಮುನ್ನಡೆದಿದೆ ಎಂದು ಸಂಘದ ಅಧ್ಯಕ್ಷ ಬಿ.ಸುರೇಶ್ ಹಾಲೇಕಲ್ಲು ಹರ್ಷ ವ್ಯಕ್ತಪಡಿಸಿದರು.

ನಗರದ ಜಯದೇವ ಸರ್ಕಲ್‌ನಲ್ಲಿರುವ ಶಂಕರ ಮಠದಲ್ಲಿ ಇಂದು ಜರುಗಿದ ಸಂಘದ 8ನೇ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಷೇರುದಾರರು ಹಾಗೂ ಆಡಳಿತ ಮಂಡಳಿಯವರ ಉತ್ತಮ ಸಹಕಾರದಿಂದ ಪ್ರಗತಿ ಸಾಧಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ.ಮುರುಗೇಶ್ ಅವರು ವಿಶೇಷ ಅತಿಥಿಗಳಾಗಿ ಆಗಮಿಸಿ ಮಾತನಾಡಿ, ಸಹಕಾರಿ ಅಭಿವೃದ್ಧಿಗೆ ಹಲವಾರು ಸಲಹೆಗಳನ್ನು ನೀಡಿದರು.

1128 ಸದಸ್ಯರನ್ನು ಹೊಂದಿರುವ ನಮ್ಮ ಸಹಕಾರಿಯು 18.33 ಷೇರು ಬಂಡವಾಳ ಹೊಂದಿದೆ. 7.75 ಕೋಟಿ ರೂ.ಠೇವಣಿ ಸಂಗ್ರಹಿಸಿದ್ದು, 6.19 ಕೋಟಿ ರೂ. ಸಾಲ ನೀಡಲಾಗಿದೆ. 9.30 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದ್ದು, ಈ ಬಾರಿ 28.03 ಲಕ್ಷ ರೂ. ಲಾಭ ಗಳಿಸಿರುವುದಾಗಿ ವರದಿ ಮಂಡಿಸಿದ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಆರ್.ವೆಂಕಟಚಲ ಮೂರ್ತಿ ತಿಳಿಸಿದರು.

ಸಂಘದ ಅಭಿವೃದ್ಧಿಗೆ ಕಾರಣರಾದ ಸದಸ್ಯರನ್ನು, ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡಿದ ಸದಸ್ಯರನ್ನು ಮತ್ತು ಪಿಗ್ಮಿ ಸಂಗ್ರಾಹಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಹಕಾರಿ ಉಪಾಧ್ಯಕ್ಷ ಜೆ.ಕೆ. ಶಿವಕುಮಾರ್, ನಿರ್ದೇಶಕರಾದ ಕೆ.ಹೆಚ್ ಶಿವಯೋಗಪ್ಪ, ಎನ್ ರಾಜಣ್ಣ, ಹೆಚ್.ಬಿ ಮಂಜುನಾಥ್, ಟಿ.ಮಹಾಂತೇಶ್, ಎಂ. ಹೆಚ್.ರಾಜಪ್ಪ, ಮಲ್ಲಿಕಾರ್ಜುನ್ ಪಿ.ವಾಲಿ, ಆಶಾ ಕೃಷ್ಣಮೂರ್ತಿ ಮತ್ತು ಹೆಚ್.ಟಿ ಶ್ವೇತಾ ಉಪಸ್ಥಿತರಿದ್ದರು.

ವಂದನಾ ಪ್ರಾರ್ಥಿಸಿದರು. ನಿರ್ದೇಶಕ ಆರ್.ಎನ್ ಮಾರುತಿ ಸ್ವಾಗತಿಸಿದರು. ನಿರ್ದೇಶಕ ಎಸ್.ವಿ ರುದ್ರಮುನಿ ವಂದಿಸಿದರು.

ಚೈತ್ರಾ ನಿರೂಪಿಸಿದರು. ಸಿಬ್ಬಂದಿ ವರ್ಗದ ಅರವಿಂದ, ವೀರೇಂದ್ರ, ಪರಶುರಾಮ್ ಮತ್ತು ಪಿಗ್ಮಿ ಸಂಗ್ರಹಕಾರರು ಹಾಜರಿದ್ದರು.

## ಶೈಕ್ಷಣಿಕ ಶುಲ್ಕ ಮರುಪಾವತಿಗೆ ಅರ್ಜಿ

ದಾವಣಗೆರೆ,ಸೆ.15- ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಪಡೆದ ಕ್ರೀಡಾಪಟುಗಳಿಗೆ ಪ್ರಸಕ್ತ ಸಾಲಿಗೆ ಶೈಕ್ಷಣಿಕ ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನಿಸಲಾಗಿದೆ. ಇದೇ ದಿನಾಂಕ 18 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿಗೆ ಸಲ್ಲಿಸಲು ಸಹಾಯಕ ನಿರ್ದೇಶಕ ರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 22ರವರೆಗೆ ಉಚಿತ ಓಶೋ ಧ್ಯಾನ ಶಿಬಿರ ನಡೆಯಲಿದೆ. ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ಆಯೋಜಿಸಿರುವ ಈ ಶಿಬಿರದಲ್ಲಿ ಆಸಕ್ತರು ಭಾಗವಹಿಸಬಹುದು ಎಂದು ಪುಷ್ಪ (90367 19573), ಅರ್ಚನ (97385 72318) ತಿಳಿಸಿದ್ದಾರೆ.

# ಹರಿಹರ ಹೊಸಭರಂಪುರ ಊರಮ್ಮ ದೇವಿಗೆ ವಿಶೇಷ ಪೂಜೆ



ಹರಿಹರ, ಸೆ.15- ನಾಡಿನಲ್ಲಿ ಮಳೆ ಬೆಳೆಗಳು ಸಂಮೃದ್ಧಿಯಾಗಿ ರೈತರ ಬದುಕು ಹಸನಾಗಲಿ ಎಂದು ಪ್ರಾರ್ಥಿಸಿ ನಗರದ ಹೊಸಭರಂಪುರ ಬಡಾವಣೆಯ ಶ್ರೀ ಗ್ರಾಮದೇವತೆ ಊರಮ್ಮ ದೇವಿಗೆ ಪಡ್ಲಿಗೆ ಪೂಜಾ ಕಾರ್ಯವನ್ನು ಮಾಡಲಾಯಿತು.

ಈ ವೇಳೆ ಭಕ್ತರು ಹೋಳಿಗೆ, ಕಡುಬು, ಅನ್ನ, ಮೊಸರು, ಹಾಲು, ಹಣ್ಣು, ಕಾಯಿ ಎಡೆಯನ್ನು ದೇವಿಗೆ ಅರ್ಪಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಪೂಜಾರ್ ಶಿವಮೂರ್ತಪ್ಪ, ಅಧ್ಯಕ್ಷ ಸುರೇಶ್ ಚಂದಪೂರ್, ಉಪಾಧ್ಯಕ್ಷ ಎಂ. ಚಿದಾನಂದ ಕಂಚಿಕೇರಿ, ಪ್ರಧಾನ ಕಾರ್ಯದರ್ಶಿ ಕೆ.ಬಿ. ರಾಜಶೇಖರ್, ಖಜಾಂಚಿ ಬೆಣ್ಣೆ ರೇವಣಸಿದ್ದಪ್ಪ, ಸಹ ಕಾರ್ಯದರ್ಶಿಗಳಾದ ಕೆ.ಜಿ. ಗುತ್ಯಪ್ಪ, ರಾಘು ಚೌಗಲೆ, ಹಣಿಗಿ ಸುರೇಶ್, ನಿರ್ದೇಶಕರಾದ ಪರಮೇಶ್ವರಪ್ಪ ನೀಲಗುಂದ, ಹಾವನೂರು ಈರಣ್ಣ, ಸಿಂಗಾಡಿ ಸಿದ್ದಪ್ಪ, ನೀಲಗುಂದ ಜಗದೀಶ್, ಮಜ್ಜಿಗೆ ಚಂದ್ರಪ್ಪ, ಹರಪನಹಳ್ಳಿ ಬಸವರಾಜಪ್ಪ, ದಾವಣಗೆರೆ ಶಿವಾನಂದಪ್ಪ, ಅರ್ಚಕ ನಾಗರಾಜ್ ಪೂಜಾರ್, ಭರಂಪುರ ಯುವಕ ಸಂಘದ ಪದಾಧಿಕಾರಿಗಳಾದ ವೇದ ಮೂರ್ತಿ, ಬೆಣ್ಣೆ ಸಿದ್ದೇಶ್, ಮಂಜುನಾಥ್, ಹಾವ ನೂರು ಶಂಭು, ಹಾಲೇಶ್, ಕೆ.ಬಿ. ಚಂದ್ರು, ಗಿರೀಶ್, ರಾಘವೇಂದ್ರ, ಕೆ.ಬಿ. ಪ್ರಕಾಶ್, ಡಿಶ್ ಶಂಭುಲಿಂಗ ಸ್ವಾಮಿ, ಸಂಜಯ್, ಸಚ್ಚಿನ್, ನಿಕ್ಕಿಲ್, ದರ್ಶನ್, ಚೇತನ್ ಇತರರು ಹಾಜರಿದ್ದರು.

# ದೊಡ್ಡಬಾತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ದಾವಣಗೆರೆ, ಸೆ.15- ದೊಡ್ಡಬಾತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಇದರ ನಿರ್ದೇಶಕರಾಗಿದ್ದ ಕೆ.ಜಿ.ಬಸವರಾಜ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ತೆರವಾಗಿದ್ದ ಸ್ಥಾನಕ್ಕೆ ದೊಡ್ಡಬಾತಿ ಗ್ರಾಮದ ಕೆ.ಜಿ.ಉಮೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಬಿ. ಎಂ.ಉಜ್ಜೇಶ್, ಉಪಾಧ್ಯಕ್ಷರಾದ ರೇವಮ್ಮ, ನಿರ್ದೇಶಕರು ಗಳಾದ ಬಿ.ಎಂ.ಶೇಖರಪ್ಪ, ನಾಗರಾಜ ಪಿ.ಎ, ಗಾಯಿತ್ರಮ್ಮ ಬಿ.ಜಿ. ವಿಶ್ವಾಂಬರ, ಬಿ.ಸಿದ್ದಪ್ಪ, ಹೆಚ್.ಪಿ.ಸಿದ್ದಪ್ಪ, ಹೆಚ್.ಆರ್.ಶಿವಕುಮಾರ್, ಎಂ. ಮರುಳಸಿದ್ದಪ್ಪ, ಎ.ವಿ.ನಾಗರಾಜ್, ಬ್ಯಾಂಕ್ ಪ್ರತಿನಿಧಿ ಜಿ.ವಿ.ಅಭಿಲಾಷ್, ಸಂಘದ ಸಿಬ್ಬಂದಿಗಳಾದ ಮಲ್ಲೇಶಪ್ಪ ಹೆಚ್.ಆರ್. ಹಾಗೂ ಎ.ವಿ.ಸಿದ್ದಪ್ಪ ಅವರುಗಳು ಉಪಸ್ಥಿತರಿದ್ದರು.

# ಪೌರ ಕಾರ್ಮಿಕರೊಂದಿಗೆ ಸಾರ್ವಜನಿಕರು ಸ್ವಚ್ಛತೆಗೆ ಸಹಕರಿಸಬೇಕು : ಜಗಳೂರು ಶಾಸಕ ದೇವೇಂದ್ರಪ್ಪ



ಜಗಳೂರು, ಸೆ. 15 - ಸಾರ್ವಜನಿಕರೂ ಸಹ ಸ್ವಚ್ಛತೆ ಕಾಪಾಡಲು ಪೌರ ಕಾರ್ಮಿಕರೊಂದಿಗೆ ಕೈಜೋಡಿಸಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ಕರೆ ನೀಡಿದರು.

ಪಟ್ಟಣದ ನಟರಾಜ್ ಟಾಕೀಸ್ ಬಳಿ ಸಸಿಗೆ ನೀರೆರೆದು, ಪ್ರತಿಜ್ಞಾ ವಿಧಿಯೊಂದಿಗೆ 'ಸ್ವಚ್ಛತೆಯೇ ಸೇವೆ - 2024' ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪಟ್ಟಣ ಪಂಚಾಯಿತಿಯ ಕಸದ ವಾಹನ ಪ್ರತಿ ನಿತ್ಯ ಪ್ರತಿ ವಾರ್ಡ್‌ಗಳಲ್ಲಿ ಮನೆ ಬಾಗಿಲಿಗೆ ಬರುವಾಗ ಸಾರ್ವಜನಿಕರು ಒಣಕಸ, ಹಸಿ ಕಸ ಪ್ರತ್ಯೇಕ ಗೊಳಿಸಿ ವಿಲೇವಾರಿಯೊಂದಿಗೆ ಪಟ್ಟಣದ ನೈರ್ಮಲ್ಯ ಕಾಪಾಡಬೇಕು ಎಂದರು.

ಸಾರ್ವಜನಿಕ ಸ್ಥಳಗಳಲ್ಲಿ ಕಸವಿಲೇವಾರಿಗಳಿಂದ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತವೆ. ಜಾಗೃತರಾಗಿ ಮುಂಜಾಗ್ರತೆಯಿಂದ ಚರಂಡಿ ಸೇರಿದಂತೆ ಮನೆಯ ನೆರೆಹೊರೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು' ಎಂದು ಸಲಹೆ ನೀಡಿದರು.

ಸರ್ಕಾರದ ನಿರ್ದೇಶನದಂತೆ ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳು ಸೇರಿದಂತೆ ಸ್ಥಳೀಯ ಆಡಳಿತ ಸಂಸ್ಥೆಗಳು ಗಾಂಧಿ ಜಯಂತಿ ಅಂಗವಾಗಿ ಆಯೋಜಿಸುವ ಸ್ವಚ್ಛತೆಯ ಜನಜಾಗೃತಿ ಕುರಿತು ಆಯೋಜಿಸುವ ಕಾರ್ಯಕ್ರಮಗಳು ಪ್ರಶಂಸನೀಯ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು' ಎಂದು ಶಾಸಕ ದೇವೇಂದ್ರಪ್ಪ ತಿಳಿಸಿದರು.

ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ ಮಾತನಾಡಿ,' ಸರ್ವರೂ ಸ್ವಚ್ಛತೆಯೇ ಸೇವೆ ಎಂಬ ಭಾವನೆ ಮೈಗೂಡಿಸಿಕೊಳ್ಳಬೇಕಿದೆ. ಸೆ.19 ರಿಂದ ಅ. 2 ರವರೆಗೆ ಸ್ವಚ್ಛತಾ ಅಭಿಯಾನ ನಡೆಸಲಾಗುತ್ತಿದೆ. ಪರಿಸರ ಸ್ವಚ್ಛತೆಗೆ ಸಹಕರಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ.ಪಂ. ಅಧ್ಯಕ್ಷ ನವೀನ್ ಕುಮಾರ್, ಸದಸ್ಯರಾದ ರಮೇಶ್ ರೆಡ್ಡಿ, ಲಲಿತಾಶಿವಣ್ಣ, ಶಕೀಲ್ ಅಹಮ್ಮದ್, ಲುಕ್ಮಾನ್ ಖಾನ್, ಮಹಮ್ಮದ್ ಅಲಿ, ಆರೋಗ್ಯ ನಿರೀಕ್ಷಕ ಪ್ರಶಾಂತ್ ಹಾಗೂ ಪೌರ ಕಾರ್ಮಿಕರು ಇದ್ದರು.

# ಗಣಪತಿ ಅದ್ದೂರಿ ಮೆರವಣಿಗೆ

(1ನೇ ಪುಟದಿಂದ) ಬಂದೋಬಸ್ತ್‌ನಡುವೆ ಮೆರವಣಿಗೆ ಮೆಲ್ಲಗೆ ಸಾಗತೊಡಗಿತು. ಗಣಪತಿ ವಿಗ್ರಹಕ್ಕೆ ರಸ್ತೆಯ ಇಕ್ಕೆಲದ ಕಟ್ಟದ ಮೇಲಿದ್ದ ಮಹಿಳೆಯರು ಹೂವು ಸುರಿದು ಭಕ್ತಿ ಸಮರ್ಪಿಸಿದರು.


ಕೇಸರಿ ಶಾಲು ಧರಿಸಿದ ಯುವಕ-ಯುವತಿಯರು ಜೈ ಶ್ರೀರಾಮ್ ಘೋಷನೆ ಕೂಗುತ್ತಾ ಡಿಜೆ ಹಾಡಿಗೆ ಮೈ ಕುಣಿಸು ತ್ತಿದ್ದರು. ಮೆರವಣಿಗೆ ವೇಳೆ ಆಗಮಿಸಿದ ವರುಣನ ಸಿಂಚನಕ್ಕೆ ಹುಡುಗರು ಉತ್ಸಾಹದಿಂದ ನೃತ್ಯ ಮಾಡಿದರು.

ಮೆರವಣಿಗೆಯು ಮಸೀದಿ ಸಮೀಪಿಸುತ್ತಿದ್ದಂತೆ ಆರಕ್ಷಕರು ಬ್ಯಾರಿಕೆಡ್ ಹಾಕಿ ಬಿಗಿ ಬಂದೋಬಸ್ತ್ ಮಾಡುವ ಮೂಲಕ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಸುರಕ್ಷತೆ ನೀಡಿದರು. ಹ್ಯಾಂಡ್ ಕ್ಯಾಮೇರಾ, ಡ್ರೋನ್ ಕ್ಯಾಮೇರಾ ಹಾಗೂ ಸಿಸಿ ಟಿವಿಯಲ್ಲಿ ಮೆರವಣಿಗೆಯನ್ನು ಸೆರೆ ಹಿಡಿಯಲಾಯಿತು.

ವಿನಾಯಕ ಮಹಾಸ್ವಾಮಿಯ ಮೆರವಣಿಗೆಯು 2ನೇ ಮುಖ್ಯ ರಸ್ತೆಯ ಮೂಲಕ , ಪಿ.ಬಿ. ರಸ್ತೆ, ಅರುಣ ವೃತ್ತದಿಂದ ರಾಂ ಆ್ಯಂಡ್ ಕೊ ವೃತ್ತದ ಮುಖೇನ ಪಿ.ಬಿ. ರಸ್ತೆಯ ಮಾರ್ಗವಾಗಿ ಸಾಗಿ ನಂತರ ಬಾತಿ ಕೆರೆಯಲ್ಲಿ ಗಣಪ ಮೂರ್ತಿ ವಿಸರ್ಜಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ದೂಡಾದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಎ. ನಾಗರಾಜ್, ಶ್ರೀರಾಮ ಸೇನೆಯ ಮಣಿ ಸರ್ಕಾರ್, ಜಾಗರಣ ವೇದಿಕೆಯ ಸತೀಶ್ ಪೂಜಾರಿ ಸೇರಿದಂತೆ ಸಮಿತಿಯ ಮುಖಂಡರು ಹಾಗೂ ಸಾರ್ವಜನಿಕರು ಇದ್ದರು.

## ನಗರದಲ್ಲಿ ಇಂದು ಅನ್ನಸಂತರ್ಪಣೆ



ಪಿ.ಜೆ. ಬಡಾವಣೆಯ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ಶ್ರೀ ವರ ಸಿದ್ದಿವಿನಾಯಕ ದೇವಸ್ಥಾನದ ಮುಂಭಾಗದಲ್ಲಿ ಶ್ರೀ ವಿನಾಯಕ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಪ್ರಯುಕ್ತ ರಾಮ್ ಅಂಡ್ ಕೋ ಗೆಳೆಯರ ಬಳಗದಿಂದ ಇಂದು ಮಧ್ಯಾಹ್ನ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಸಾರ್ವಜನಿಕ ಪ್ರಕಟಣೆ

ಗ್ರಾಹಕರು : ಜಿ.ಎಂ. ಮಲ್ಲಿಕಾರ್ಜುನಯ್ಯ ಬಿನ್ ಲೇಟ್ ರುದ್ರಯ್ಯ, ಮುಖ್ಯೋಪಾಧ್ಯಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಲ್ಲಾಗಟ್ಟೆ, ಜಗಳೂರು ತಾ.

ಇತ್ತೀಚೆಗೆ ದಾವಣಗೆರೆ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆಯ INDUS IND ಬ್ಯಾಂಕ್, ದಾವಣಗೆರೆ ಮತ್ತು ಇತರೆ ಇವರ ವಿರುದ್ಧ ಗ್ರಾಹಕನಿಗಾದ ಸೇವಾ ನ್ಯೂನ್ಯತೆಗಾಗಿ ಮತ್ತು ಮಾನಸಿಕ ಹಿಂಸೆ, ಯಾತನೆಗಾಗಿ ರೂ. 25000/- ಗಳ ಪಾರಿಹಾರವನ್ನು ಮತ್ತು ವ್ಯಾಜ್ಯದ ಖರ್ಚಾಗಿ ರೂ. 5000/- ಗಳನ್ನು ಕೊಡುವಂತೆ ಆದೇಶಿತು. ಗ್ರಾಹಕ ಶ್ರೀ ಜಿ.ಎಂ. ಮಲ್ಲಿಕಾರ್ಜುನಯ್ಯನವರು TVS ಜ್ಯುಪಿಟರ್ ವಾಹನವನ್ನು INDUS IND ಬ್ಯಾಂಕ್ ಇವರಲ್ಲಿ ಸಾಲವನ್ನು ಪಡೆದು ಖರೀದಿಸಿ, ಸಾಲದ ಹಣ, EMI, ಬಡ್ಡಿ ಹಣವನ್ನು ಕಾಲಾನುಕಾಲಕ್ಕೆ ತಮ್ಮ ಸಂಬಳದಲ್ಲಿ ಮುರುಗಡೆಯಾಗುವಂತೆ ಕೋರಿಕೊಂಡಿದ್ದರು. ಗ್ರಾಹಕರು ಜಗಳೂರು ಕೆನಾರ ಬ್ಯಾಂಕ್ ಶಾಖೆಯಿಂದ ಸಾಲದ ಹಣ ಸಂಪೂರ್ಣ ತೀರುವಳಿಯಾಗಿತ್ತು. ಆದರೆ ಗ್ರಾಹಕರ CIBIL ಸ್ಕೋರ್‌ನಲ್ಲಿ ಸಾಲದ ಹಣ 'ಬಾಕಿ' ಎಂದು ತೋರಿಸುತ್ತಿದ್ದರಿಂದ ಅವರ ಇತರೆ ಅಗತ್ಯಗಳನ್ನು ಪೂರೈಸಿಕೊಳ್ಳಲು ಅವರಿಗೆ ಇತರೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ದೊರೆಯಲಿಲ್ಲ. ಈ ಬಗ್ಗೆ ಗ್ರಾಹಕರೂ ಸಾಕಷ್ಟು ಬಾರಿ INDUS IND ಬ್ಯಾಂಕ್‌ನವರಲ್ಲಿ ಅಲೆದಾಡಿದ್ದರೂ ಪ್ರಯೋಜವಾಗಿರಲಿಲ್ಲ. CIBIL ಸ್ಕೋರಿನಲ್ಲಿ ನಮೂದಾದ ಹಣವನ್ನು ಗ್ರಾಹಕರು ಪಾವತಿಸಿದ್ದರೂ ಅದನ್ನು INDUS IND ಬ್ಯಾಂಕ್ ನವರು ಸರಿಪಡಿಸಿಕೊಡಲಿಲ್ಲ. ಗ್ರಾಹಕರಿಗಾದ ಮಾನಸಿಕ ಅಘಾತ ಸೇವಾ ನ್ಯೂನ್ಯತೆ ಅನವಶ್ಯಕ ಅಲೆದಾಟ, ನಷ್ಟ ಬರ್ತೆ ವಗ್ಯೆರೆಗಳಿಗಾಗಿ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ನ್ಯಾಯಾಲಯಕ್ಕೆ ಪರ್ಯಾದು ಸಲ್ಲಿಸಿ ಪರಿಹಾರ ಕೇಳಿದ್ದರು.

ಪರ್ಯಾದುದಾರ-ಗ್ರಾಹಕರ ಪರವಾಗಿ ಶ್ರೀ ದಿಲೀಪ್ ಕುಮಾರ್ ಬಿ.ಎನ್. ವಕೀಲರುವಾದ ಮಂಡಿಸಿದ್ದರು. ದಾವಣಗೆರೆ ಜಿಲ್ಲಾ ಗ್ರಾಹಕ ವೇದಿಕೆಯ ಅಧ್ಯಕ್ಷರಾದ ಶ್ರೀಯುತ ಮಹಂತೇಶ ಶಿಗ್ಲಿಯವರು ದಿನಾಂಕ 02.09.2024 ರಂದು ಮೇಲ್ಕಂಡಂತೆ ಆದೇಶ ಹೊರಡಿಸಿದ್ದು, ಶ್ರೀಯುತ ತ್ಯಾಗರಾಜನ್ ಮತ್ತು ಶ್ರೀಮತಿ ಗೀತಾ ಬಿ.ಯು. ಗ್ರಾಹಕ ವೇದಿಕೆಯ ಸದಸ್ಯರು ಉಪಸ್ಥಿತರಿದ್ದರು.

ಸ್ಥಳ : ದಾವಣಗೆರೆ
ದಿನಾಂಕ : 15.9.2024

**ದಿಲೀಪ್ ಕುಮಾರ ಬಿ.ಎನ್.**
ಬಿ.ಕಾಂ. ಎಲ್‌ಎಲ್.ಬಿ., ವಕೀಲರು
ಮಾರುತಿ ಬಿಲ್ಡಿಂಗ್, ಚರ್ಚ್ ರೋಡ್, ಪಿ.ಜೆ. ಬಡಾವಣೆ,
ರಾಮ್ ಅಂಡ್ ಕೋ ಸರ್ಕಲ್, ಎದುರುಗಡೆ ರಸವಂತಿ
ಜ್ಯೂಸ್ ಸೆಂಟರ್, ದಾವಣಗೆರೆ - 577002,
**ಫೋ : 94823 51819**


# ಸಾಧನೆಯ ಮಹಾಮೇರು ಜಗದ್ಗುರು ವಾಗೀಶ ಪಂಡಿತಾರಾಧ್ಯರು

ವೀರಶೈವ ಧರ್ಮ ಪೀಠಗಳಲ್ಲಿ ಒಂದಾದ ಶ್ರೀ ಶೈಲ ಸೂರ್ಯ ಸಿಂಹಾಸನ ಪೀಠವು ಆಂಧ್ರಪ್ರದೇಶದ ಶ್ರೀ ಶೈಲಂನಲ್ಲಿ ನೆಲೆಗೊಂಡು ಜನತೆಯಲ್ಲಿ ತುಂಬಿಕೊಂಡಿರುವ ಅಜ್ಞಾನಾಂಧಕಾರವನ್ನು ಹೊಡೆದು ಹಾಕಿ, ಸುಜ್ಞಾನದ ಬೆಳಕನ್ನು ತುಂಬಿದ ಮಹಾಪೀಠವಾಗಿದೆ.

ಆದಿ ಜಗದ್ಗುರು ಪಂಡಿತಾರಾಧ್ಯರು ಶಿವನ ಆಜ್ಞೆಯಂತೆ ಶ್ರೀ ಶೈಲ ಮಹಾಕ್ಷೇತ್ರದ ಶ್ರೀ ಮಲ್ಲಿಕಾರ್ಜುನನ ಮಹಾಜ್ಯೋತಿರ್ಲಿಂಗ ಮುಖದಿಂದ ದಿವ್ಯ ದೇಹಿಯಾಗಿ ಜನಿಸಿ, ಶಿವಾದ್ವೈತ ಸಿದ್ಧಾಂತವನ್ನು ಸಂಸ್ಥಾಪಿಸಿ ಶಿವನ ಸ್ವರೂಪವಾದ ಇಷ್ಟಲಿಂಗವನ್ನು ಎಲ್ಲಾ ಮಾನವರಿಗೂ ಅನುಗ್ರಹಿಸಿ ಶಿವ ಸೂತ್ರಾದಿ ರಹಸ್ಯಗಳನ್ನು ಉಪದೇಶಿಸಿ ಈ ನಾಡನ್ನು ಬೆಳಗಿದವರಾಗಿದ್ದಾರೆ.

ಶ್ರೀಶೈಲ ಪೀಠದ ಇತಿಹಾಸದಲ್ಲಿ ಶ್ರೀ ಪತಿ ಪಂಡಿತಾರಾಧ್ಯರು ಮತ್ತು ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಭಾರತದಲ್ಲೆಡೆ ಸಂಚರಿಸಿ ತಮ್ಮ ಜ್ಞಾನದ ವರ್ಚಸ್ಸು ಮತ್ತು ತಪೋ ಬಲದಿಂದ ವೀರಶೈವ ಧರ್ಮ ವನ್ನು ಮತ್ತಷ್ಟು ಉತ್ತುಂಗಕ್ಕೆರಿಸಿದ ಕೀರ್ತಿಶಾಲಿಗಳೆನ್ನಿಸಿ ದ್ದಾರೆ. ಕದಂಬ, ಚಾಲುಕ್ಯ, ರಾಷ್ಟ್ರಕೂಟ ಹಾಗೂ ವಿಜಯನಗರದ ಅರಸು ಮನೆತನಗಳು ಶ್ರೀ ಶೈಲ ಸೂರ್ಯಪೀಠಕ್ಕೆ ಅನೇಕ ದಾನ ದತ್ತಿಗಳನ್ನು ನೀಡುವ ಮೂಲಕ ಪರಮ ಪೀಠಾಚಾರ್ಯರ ಮಹಿಮೆಗೆ ತಲೆಬಾಗಿ ಅವರನ್ನು ತಮ್ಮ ಆರಾಧ್ಯ ದೈವವನ್ನಾಗಿಸಿಕೊಂಡವರಾಗಿದ್ದಾರೆ. ಇಂತಹ ಪರಂಪರೆಯುಳ್ಳ ಮಹಾಪೀಠಕ್ಕೆ "ಸ್ವರ್ಣಯುಗ" ವನ್ನು ಬರೆದು ಅದನ್ನು ದಾಖಲಿಸಿದ ಕೀರ್ತಿ ಲಿಂ, ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರಿಗೆ ಸಲ್ಲುತ್ತದೆ.

ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಭಗವತ್ಪಾದರು 1908ರಲ್ಲಿ ರಾಣೆಬೆನ್ನೂರು ತಾಲ್ಲೂಕಿನ ಮುದೇನೂರು ಗ್ರಾಮದ ಹಿರೇಮಠದ ವೇ॥ ಶ್ರೀ ಬಸವಯ್ಯ ಸ್ವಾಮಿ ಮತ್ತು ಶ್ರೀಮತಿ ರುದ್ರಮ್ಮಾಂಭೆ ಅವರ ಪುಣ್ಯ ಗರ್ಭದಲ್ಲಿ ಜನಿಸಿ ಚಿಕ್ಕಂದಿನಲ್ಲಿಯೇ ವೀರಶೈವಧರ್ಮ ಸಂಸ್ಕಾರಗಳನ್ನು ಮೈಗೂಡಿಸಿಕೊಂಡು ಸಿದ್ಧಾಂತ ಶಿಖಾಮಣಿ, ಯೋಗಶಾಸ್ತ್ರ, ವೇದೋಪನಿಷತ್ ಹಾಗೂ ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸಿಸಿ ಆಗಾಧ ಪ್ರತಿಭೆಯ ಪ್ರಭೆಯನ್ನು ತಮ್ಮದಾಗಿಸಿಕೊಂಡವರು. ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಲಿಂ. ಸಿದ್ದಲಿಂಗ ಶಿವಾಚಾರ್ಯ ಭಗವತ್ಪಾದರ ಕೃಪಕಾರುಣ್ಯಕ್ಕೆ ಪಾತ್ರರಾಗಿ ಅವರ ಮಾರ್ಗದರ್ಶನದಲ್ಲಿ ಬೆಳೆದವರು. ಕಾಶಿ ಪೀಠದಲ್ಲಿ ಹೆಚ್ಚಿನ ವೀರಶೈವ ಸಿದ್ಧಾಂತವನ್ನು ಮತ್ತು ಭಾರತೀಯ ಸನಾತನ ಧರ್ಮ ಸಂಸ್ಕೃತಿಯ ಅಧ್ಯಯನವನ್ನು ಕೈಗೊಂಡು ವಿದ್ವಾತ್‌ಪೂರ್ಣ ಜ್ಞಾನವನ್ನು ಸಂಪಾದಿಸಿ ವಿದ್ಯಾನಿಧಿಯಾಗಿ ಹೊರಹೊಮ್ಮಿದವರು ಪಾಳಿ, ಪಾರ್ಸಿ, ಸಂಸ್ಕೃತ, ಬಂಗಾಳಿ, ಹಿಂದಿ, ಉರ್ದು, ಕನ್ನಡ, ತೆಲುಗು, ಭಾಷೆಗಳನ್ನು ಕಲಿತು ಅವುಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತ ಪ್ರವಚನ ನೀಡುವ ಪರಿ ತುಂಬಾ ಅದ್ವಿತೀಯವಾಗಿರುತಿತ್ತು. ಅಂತಹ ಮಹಾಮಹಿಮರು ದಿನಾಂಕ: 07.07.1940 ರಲ್ಲಿ ಶ್ರಿ ಶೈಲ ಪೀಠದ ಅಧಿಪತ್ಯವನ್ನು ವಹಿಸಿಕೊಂಡು ಶ್ರೀ ಪೀಠದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿ ಶ್ರೀ ಪೀಠವನ್ನು ಉತ್ತುಂಗಕ್ಕೆರಿಸಿದ ಧೀರೋದಾತರು. ಶ್ರೀ ಭಗವತ್ಪಾದರು ರಾಷ್ಟ್ರಭಕ್ತಿ ಮತ್ತು ರಾಷ್ಟ್ರಪ್ರೇಮಗಳಲ್ಲಿ ಮೇಲ್ಪಂಕ್ತಿ ಹಾಕಿದವರು.



ಶ್ರೀಗಳವರ ಪುಣ್ಯಸ್ಮರಣೆ ಪ್ರಯುಕ್ತ ಕಿರು ಲೇಖನ

ದೇಶದ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿ ಮಹಾತ್ಮ ಗಾಂಧೀಜಿಯವರ ಪ್ರೀತಿ - ಗೌರವಕ್ಕೆ ಪಾತ್ರ ರಾದವರು ಅಂತಹ ಮಹಾನ್ ವ್ಯಕ್ತಿತ್ವದ ಎದುರಿಗೆ ಅಂದಿನ ರಾಷ್ಟ್ರಪತಿಗಳಾದ ಡಾ॥ ಬಾಬು ರಾಜೇಂದ್ರ ಪ್ರಸಾದ್, ಡಾ॥ ಎಸ್ ರಾಧಕೃಷ್ಣನ್ ಇನ್ನೂ ಅನೇಕರು ರಾಜಕೀಯ ಮಾರ್ಗದರ್ಶನ ಪಡೆದಿದ್ದಾರೆ.

ಶ್ರೀ ವಾಗೀಶ ಪಂಡಿತಾರಾಧ್ಯ ಭಗವತ್ಪಾದರು ಸಮನ್ವಯ ಸಮತೋಲನದ ಸಮಗ್ರ ದೃಷ್ಟಿಯುಳ್ಳವರಾಗಿ ಎಲ್ಲಾ ಜಾತಿ-ಮತ-ಪಂಥಗಳೊಂದಿಗೆ ಸಮರಸವನ್ನು ಸಾಧಿಸಿ ತಮ್ಮ ಘನ ವ್ಯಕ್ತಿತ್ವವನ್ನು ರೂಪಿಸಿಕೊಂಡವರಾಗಿದ್ದರು. ಬೆಳಗು ಪಂಚಾಚಾರ್ಯ ತತ್ವವೇ ಬೆಳಗು ಬಸವನ ಭಕ್ತಿ ತತ್ವವೇ ಎಂಬ ಅವರ ಕವಿತೆಯ ಸಾಲು ವೀರಶೈವ-ಲಿಂಗಾಯತ ಕವಲುದಾರಿಯನ್ನು ಒಗ್ಗೂಡಿಸುವ ದಾರಿದೀಪದಂತಿರುವುದುಸಹ ಬಹು ವಿಶೇಷವಾಗಿದೆ.

ಶ್ರೀ ಭಗವತ್ಪಾದರು ಬುದ್ದಿ-ಮನಸ್ಸುಗಳನ್ನು ತಿದ್ದುವುದಲ್ಲದೆ ಶರೀರವನ್ನು ಸದೃಢವಾಗಿಸುವ ಕಲೆಯನ್ನು ಕರಗತ ಮಾಡಿಕೊಂಡು ವೈದ್ಯ ವಿದ್ಯೆಯಲ್ಲಿ ಧನ್ವಂತರಿಗಳಾಗಿ ನಾಡಿನ ಲಕ್ಷಾಂತರ ಅನಾರೋಗ್ಯ ಪೀಡಿತರಿಗೆ ದಿವ್ಯೌಷಧಿಯಾಗಿ ಹಾಗೂ ಉತ್ತಮ ಸಂಜೀವಿನಿಯಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಆರೋಗ್ಯಕ್ಕೆ ಸಂಬಂಧಿಸಿದ ಹತ್ತಾರು ಗ್ರಂಥಗಳನ್ನು ರಚಿಸಿ ಅವುಗಳನ್ನು ಇಂದಿನ ವೈದ್ಯ ಪೀಳಿಗೆಗೆ ಹಸ್ತಾಂತರಿಸಿದ್ದಾರೆ.

ಹೀಗೆ ಭಕ್ತರನ್ನು ಬೆಳಕಿನೆಡೆಗೆ ಕರೆತಂದು ಜ್ಞಾನ-ಕ್ರಿಯೆಗಳನ್ನು ಧಾರೆಯೆರೆದು ಶ್ರೀ ಶೈಲ ಪೀಠಕ್ಕೆ ಶಕ್ತಿ ತುಂಬಿದ ಜ್ಞಾನ ಸೂರ್ಯಸಿಂಹಾಸನಾಧೀಶರಾದ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಭಕ್ತರ ಹೃದಯದಲ್ಲಿ ಸಾಧನೆಯ ಮಹಾಮೇರುವೆಂದೇ ಅಭಿದಾನವನ್ನು ಪಡೆದು 16.09.1986ರ ಭಾದ್ರಪದ ಶುದ್ಧ ದ್ವಾದಶಿಯಂದು ಲಿಂಗಾಂಗ ಸಾಮರಸ್ಯದಲ್ಲಿ ಒಂದಾಗಿ ತಮ್ಮ ಚಿತ್ಪ್ರಭೆಯನ್ನು ಹಾಗೇ ಉಳಿಸಿಕೊಂಡವರು.

ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ ಪೂಜಾಫಲ, ತಪೋಬಲ ಹಾಗೂ ದಿವ್ಯ ದೃಷ್ಟಿ ಯೋಗದ ಫಲವಾಗಿ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠ ಹಾಗೂ ಶ್ರೀ ಶೈಲ ಸೂರ್ಯ ಪೀಠಕ್ಕೆ ಪ್ರಸ್ತುತ ಸಮರ್ಥ ಪರಮ ಪೀಠಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಮತ್ತು ಶ್ರೀ ಜಗದ್ಗುರು ಡಾ॥ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಶ್ರೀ ಭಗವತ್ಪಾದರ ಬದುಕು-ಬರಹ, ನೆನಹು- ನಮನ ಕಾರ್ಯಕ್ರಮಗಳನ್ನು ಆಯೋಜಿಸುವ ಮುಖೇನ ಸ್ಮರಣಾರಾಧನೆಯನ್ನು ಆಚರಿಸುತ್ತಿರುವುದು ಈ ನಾಡಿನ ಪುಣ್ಯವೇ ಆಗಿದೆ.

- ನಿರಂಜನ ದೇವರಮನೆ, ಚಿತ್ರದುರ್ಗ.

# ಸೈದ್ಧಾಂತಿಕ ಉಗ್ರವಾದಿ ರಾಜಕೀಯದಿಂದ ಸಮಾಜಕ್ಕೆ ಬೆದರಿಕೆ





**(1ನೇ ಪುಟದಿಂದ)** ನೀಡುತ್ತವೆ ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಎಚ್ಚರಿಸಿದರು. ಹಿಂಸಾಚಾರದ ಮೂಲಕ ಚುನಾವಣೆ ದುರ್ಬಲಗೊಳಿಸುವ ಪ್ರಯತ್ನ ನೋಡಿದ್ದೇವೆ. ಇಂತಹ ಪರಿಸ್ಥಿತಿಯಿಂದ ಪ್ರಜಾಪ್ರಭುತ್ವ ಅತಿ ಶೀಘ್ರವಾಗಿ ಚೇತರಿಸಿಕೊಳ್ಳಬೇಕಿದೆ. ಒಳ್ಳೆ ವ್ಯವಸ್ಥೆ ಅಗತ್ಯವಿದೆ ಎಂದವರು ಹೇಳಿದರು.

ಪ್ರಜಾಪ್ರಭುತ್ವ ಕೇವಲ ಸರ್ಕಾರ - ಸಂಸ್ಥೆಗಳ ಜವಾಬ್ದಾರಿಯಲ್ಲ. ಪ್ರತಿ ನಾಗರಿಕನ ಜವಾಬ್ದಾರಿ. ಇದು ಸಾಮೂಹಿಕ ಪ್ರಯತ್ನ, ಇತರರ ಹಕ್ಕನ್ನು ಗೌರವಿಸಿದಾಗ ಹಾಗೂ ನಮ್ಮ ನಾಯಕರಿಂದ ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು ನಿರೀಕ್ಷಿಸಿದಾಗ ಪ್ರಜಾಪ್ರಭುತ್ವ ಬಲವಾಗುತ್ತದೆ ಎಂದರು.

ಪ್ರಜಾಪ್ರಭುತ್ವ ಕೇವಲ ಆಡಳಿತದ ವ್ಯವಸ್ಥೆಯಲ್ಲ. ಇದು ಸ್ವಾತಂತ್ರ್ಯ ಹಾಗೂ ಸಮಾನ ಜೀವನದ ಅವಕಾಶಕ್ಕಾಗಿ ಇರುವ ಮಾನವ ಜೀವನದ ಮೂರ್ತ ರೂಪ ಎಂದವರು ಬಣ್ಣಿಸಿದರು.

ಹರಿಹರ ಶಾಸಕ ಬಿ.ಪಿ.ಹರೀಶ್ ಅವರು ಸಂವಿಧಾನ ಪೀಠಿಕೆಯನ್ನು ಓದಿದರು. ಈ ವೇಳೆ ಮಾತನಾಡಿದ ಅವರು, ವಿವಿಧ ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಪ್ರಾಂತ್ಯಗಳನ್ನು ಹೊಂದಿದ್ದರೂ ಪ್ರಜಾಪ್ರಭುತ್ವದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಣುತ್ತೇವೆ. ಸಂವಿಧಾನದಡಿ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಲಾಗಿದೆ. ದೇಶ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಯಶಸ್ಸನ್ನು ಸಾಧಿಸಿ ಅಭಿವೃದ್ಧಿಯಲ್ಲಿ ಶ್ರೀಮಂತ ದೇಶಗಳೊಂದಿಗೆ ಸ್ಪರ್ಧೆಯಲ್ಲಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ. ಎನ್.ಲೋಕೇಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ.ಸಂತೋಷ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್, ಸಿದ್ದಗಂಗಾ ಶಾಲೆ ಜಯಂತ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

## ಕುಂಬಳೂರಿನಲ್ಲಿ ಗಣಪತಿ ಮೆರವಣಿಗೆ ವೇಳೆ ಅವಘಡ : ಐವರಿಗೆ ಗಾಯ



ಮಲೇಬೆನ್ನೂರು, ಸೆ. 15 - ಗಣಪತಿ ವಿಸರ್ಜನೆಯ ಮೆರವಣಿಗೆ ವೇಳೆ ಸಂಭವಿಸಿದ ಅವಘಡದಲ್ಲಿ ನಾಲ್ವರು ಮಹಿಳೆಯರು ಗಾಯಗೊಂಡಿರುವ ಘಟನೆ ಭಾನುವಾರ ಸಂಜೆ ಕುಂಬಳೂರಿನಲ್ಲಿ ನಡೆದಿದೆ.

ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದ ಗಣಪತಿ ಮೂರ್ತಿಯನ್ನು ಭಾನುವಾರ ಸಂಜೆ ವಿಸರ್ಜನೆ ಮಾಡಲೆಂದು ಟ್ರ್ಯಾಕ್ಟರ್‌ನಲ್ಲಿ ಇಟ್ಟು ಮೆರವಣಿಗೆ ಮಾಡುತ್ತಿರುವ ವೇಳೆ ಜೆಸಿಬಿ ಮೂಲಕ ಪುಷ್ಪಾರ್ಚನೆ ಮಾಡುವಾಗ ದುರ್ಘಟನೆ ಸಂಭವಿಸಿದೆ.

ಚಾಲಕನ ನಿಯಂತ್ರಣ ತಪ್ಪಿ ಜೆಸಿಬಿಯ ಬಕೆಟ್ ದೇವಸ್ಥಾನ ಬಳಿಯ ಗೋಡೆಗೆ ಬಡಿದಾಗ ಗೋಡೆ ಕುಸಿದ ಬಿದ್ದದೆ. ಆಗ ಗೋಡೆ ಪಕ್ಕದಲ್ಲಿ ನಿಂತು ಮೆರವಣಿಗೆ ನೋಡುತ್ತಿದ್ದ ಮಹಿಳೆಯರ ಮೇಲೆ ಬಿದ್ದಾಗ ರತ್ನಮ್ಮ ಡೆಲ್ಲಿ ಮಂಜುನಾಥ್, ಜ್ಯೋತಿ, ಸಿರಿ, ಶಂಕ್ರಮ್ಮ, ಬಸಮ್ಮ ಎಂಬುವವರಿಗೆ ಪೆಟ್ಟಾಗಿದೆ.

ಗಾಯಗೊಂಡವರನ್ನು ತಕ್ಷಣ ಮಲೇಬೆನ್ನೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ದಾವಣಗೆರೆ ಆಸ್ಪತ್ರೆಗೆ ಸಾಗಿಸಲಾಗಿದೆ ರತ್ನಮ್ಮ ತೀವ್ರ ಗಾಯಗೊಂಡಿದ್ದು, ಮಣಿಪಾಲ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಗ್ರಾಮದ ಮುಖಂಡ ಬಿ.ಶಂಭುಲಿಂಗಪ್ಪ 'ಜನತಾವಾಣಿ'ಗೆ ತಿಳಿಸಿದರು.

## ಹೊನ್ನಾಳಿ ತಾಲ್ಲೂಕಿನಲ್ಲೂ ನನ್ನ ವಿರುದ್ಧ ಕುತಂತ್ರ : ಸಿರಿಗೆರೆ ಶ್ರೀ




**(1ನೇ ಪುಟದಿಂದ)** ತಾಲ್ಲೂಕಿನ ಬಸವನಗೌಡರು ಸೇರಲಿದ್ದು, ಗಂಜೇನಳ್ಳಿಯಿಂದ ಅಕ್ಕಿ ಸಂತರ್ಪಣಾ ಸಮಾರಂಭ ಪ್ರಾರಂಭಿಸಿದ್ದು ಇಂದಿಗೂ ಅದನ್ನು ಮುಂದುವರೆಸಿದ ಬಗ್ಗೆ ಸ್ಮರಿಸಿದರು.

ಶಾಸಕ ಶಾಂತನಗೌಡರು ಮಾತನಾಡಿ, ಹನುಮನಹಳ್ಳಿ ಸಣ್ಣ ಗ್ರಾಮವಾದರೂ ಗ್ರಾಮದ ಬಿ.ಜಿ. ಬಸವರಾಜಪ್ಪ ಅವರ ಕುಟುಂಬವರ್ಗ ಸೇರಿದಂತೆ ಅಕ್ಕಪಕ್ಕದ ಮೂರು ಗ್ರಾಮದವರು ವ್ಯವಸ್ಥಿತವಾಗಿ ಆಚರಿಸಿದರ ಬಗ್ಗೆ ತಮ್ಮ ಮೆಚ್ಚಿಗೆ ವ್ಯಕ್ತಪಡಿಸಿದರು.

ಸಾದು ವೀರಶೈವ ಸಮಾಜದ ತಾಲ್ಲೂಕು ಅಧ್ಯಕ್ಷ ಹುಣಸಘಟ್ಟ ಗದಿಗೇಶ ಮಾತನಾಡಿ, ಇಂದಿನ ಸಿರಿಗೆರೆ ಶ್ರೀಗಳು ವಿಭಜನೆಗೊಂಡಿದ್ದ ಸಾದು ಸಮಾಜವನ್ನು ಒಗ್ಗೂಡಿಸುವಲ್ಲಿ ಮಾಡಿರುವ ಕಾರ್ಯಗಳು ಹಾಗೂ ಅನೇಕ ಪ್ರವಾಸಗಳ ಬಗ್ಗೆ ವಿವರಿಸಿ ಶ್ರೀಗಳು ಸಮಾಜದ ಶಕ್ತಿ ಕೇಂದ್ರವಾಗಿದ್ದಾರೆಂದು ಬಣ್ಣಿಸಿದರು.

ಹೊನ್ನಾಳಿ ಬಸವರಾಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು, ಸುಮತಿ ಜಯಪ್ಪ ಉಪನ್ಯಾಸ ನೀಡಿದರು. ಸಾದು ಸಮಾಜದ ರಾಜ್ಯಾಧ್ಯಕ್ಷ ಹೆಚ್.ಆರ್.ಬಸವರಾಜಪ್ಪ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿದರು.

ಶಿವ ಕೋ ಆಪ್. ಬ್ಯಾಂಕ್ ಅಧ್ಯಕ್ಷ ಶಿವಕುಮಾರ್, ಚೀಲೂರು ವಿಶ್ವನಾಥ, ಕೆಂಗಲಹಳ್ಳಿ ಷಣ್ಮುಖಪ್ಪ, ಗುರುಮೂರ್ತಿ, ಹಾಲು ಒಕ್ಕೂಟದ ನಿರ್ದೇಶಕ ಕಂಚಗಾರನಹಳ್ಳಿ ಬಸಣ್ಣ, ಸುರೇಂದ್ರಗೌಡ, ಕೂಲಂಬಿ ಬಸವರಾಜ, ಕೋಡಿಕೊಪ್ಪ ಶಿವಪ್ಪ, ಹನುಮನಹಳ್ಳಿ ಗ್ರಾಮದ ಮುಖಂಡರಾದ ಶಿವಕುಮಾರ್, ಶಂಕರಣ್ಣ, ಜಗದೀಶ, ಸಿದ್ದಪ್ಪ, ಬಸವನಗೌಡ, ರುದ್ರೇಶ್ ಸೇರಿದಂತೆ ಇನ್ನಿತರರು ಇದ್ದರು.

## 9.74 ಕೋಟಿ ರೂ. ನಿವ್ವಳ ಲಾಭ

**(1ನೇ ಪುಟದಿಂದ)** ನೀಡುತ್ತಿದೆ ಇದು ಬ್ಯಾಂಕಿನ ಪ್ರಗತಿಯನ್ನು ತೋರಿಸುತ್ತದೆ. ಬ್ಯಾಂಕಿನ ದುಡಿಯುವ ಬಂಡವಾಳ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದ್ದು, ಗ್ರಾಹಕರು ಡಿಜಿಟಲ್ ವ್ಯವಹಾರದ ಮೋಸಕ್ಕೆ ಒಳಗಾಗದೆ ಮೊಬೈಲ್‌ಗೆ ಬರುವ ಸಂದೇಶಗಳನ್ನು ಕೂಲಂಕುಶ ಪರಿಶೀಲಿಸಿ, ಮುಂದುವರೆಯುವಂತೆ ತಿಳಿಸಿದರು ಸದಸ್ಯರು ಕೇಳುವ ಮೊದಲೇ ಶೇಕಡ 21 ರಷ್ಟು ಡಿವಿಡೆಂಡ್ ನೀಡಲಾಗಿದೆ. ಬೇರೆ ಯಾವ ಬ್ಯಾಂಕಿನವರು ಸಹ ನೀಡದಷ್ಟು ಲಾಭಾಂಶವನ್ನು ನೀಡಿದೆ ಎಂದರು. ನಿರ್ದೇಶಕ ಡಾ. ಬಿ.ಎಸ್ ರೆಡ್ಡಿ ಅವರು 2023-24ನೇ ಸಾಲಿನ ಆಯವ್ಯಯ ಮಂಡಿಸಿ ಸದಸ್ಯರ ಒಪ್ಪಿಗೆ ಪಡೆದರು.

ಸಭೆ ಆರಂಭಕ್ಕೆ ಸೌಮ್ಯ ಸಂಗಡಿಗರು ಪ್ರಾರ್ಥಿಸಿದರು ನಿರ್ದೇಶಕಿ ಶಶಿಕಲಾ ಕೃಷ್ಣ ಮೂರ್ತಿ ಸ್ವಾಗತಿಸಿದರು. ನಿರ್ದೇಶಕ ಕೆ.ಎಸ್ ವೀರೇಶ್ ವಂದಿಸಿದರು. ಬ್ಯಾಂಕಿನ ಅಧಿಕಾರಿಗಳಾದ ಎಂ.ಬಿ ಕೊಟ್ರೇಶ್ ಮತ್ತು ಹೆಚ್ .ಸಿ. ಜ್ಯೋತಿಶ್ರೀ ಕಾರ್ಯಕ್ರಮ ನಿರೂಪಿಸಿದರು

ನಿರ್ದೇಶಕರಾದ ಡಾ.ಶಂಷದ್ ಬೇಗಂ, ಡಾ.ಹೆಚ್.ಶಿವಪ್ಪ, ಡಾ. ಬಿ. ಪೂರ್ಣಿಮಾ, ಡಾ.ಕೆ ಹನುಮಂತಪ್ಪ, ಡಾ.ಅರುಣ್ ಕುಮಾರ್, ಡಾ.ಸಿ. ವೈ ಸುದರ್ಶನ್, ಡಾ.ಎಂ .ಎಂ ಲಿಂಗರಾಜ್, ಕೆ ಬೊಮ್ಮಣ್ಣ, ವ್ಯವಸ್ಥಾಪನ ಮಂಡಳಿ ನಿರ್ದೇಶಕರಾದ ಡಾ. ಜೆ. ಎಸ್ ಯತೀಶ್ , ಡಾ. ಜಿ. ವೈ ವಿಶ್ವನಾಥ್. ಜಿ. ಅನಿತಾ ಕುಮಾರಿ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬಸವರಾಜ ಎಂ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಈ ವರ್ಷ ಸೇವೆಯಿಂದ ವಯೋನಿವೃತ್ತಿ ಹೊಂದಿದ ಶ್ರೀಮತಿ ಶೋಭಾ ಪಾಟೀಲ್, ಎಂ .ಎಸ್ ಪ್ರಸನ್ನ ಕುಡ್ಲೂರು, ಹೆಚ್. ಚಂದ್ರಶೇಖರ್, ಬಿ ಆರ್ ರಮೇಶ್ ಮತ್ತು ಕೆಎಸ್ ಮಂಜುನಾಥ್ ಅವರುಗಳನ್ನು ಸನ್ಮಾನಿಸಲಾಯಿತು.

ಬ್ಯಾಂಕಿನ ಹಿರಿಯ ಸಲಹೆಗಾರರಾದ ಡಿ..ವಿ.ರವೀಂದ್ರ, ಎಸ್ .ಕಲ್ಲಪ್ಪ ಮತ್ತು ಜಿ.ವಿ. ಶಿವಶಂಕರ್, ಶಾಖಾ ವ್ಯವಸ್ಥಾಪಕರಾದ ಬಿ.ಜಿ ಬಸವರಾಜಪ್ಪ, ಲಿಂಗೇಶ್ ಕೆ.ಎಂ, ಕಲಾ ಡಿ.ಎಚ್, ಜಗದೀಶ್ ಎಚ್ .ಜಿ, ಜೆ. ಸಿ ಮಂಜುನಾಥ, ಟಿ.ರೇವಣಪ್ಪ, ಎಸ್ ರಮೇಶ್ ಮತ್ತು ಜಿ.ಎಸ್ ಮಧುಕೇಶ್ವರ ಪಾಟೀಲ್ ಮತ್ತಿತರರು ಹಾಜರಿದ್ದರು.

## ವಿಶ್ವ ಮಟ್ಟಕ್ಕೆ ಬೆಳೆಯುವ ಹಂಬಲ

**(1ನೇ ಪುಟದಿಂದ)** ಕಲೆಯಾಗಿದೆ ಆದರೆ, ನಾನಾ ಕಾರಣಗಳಿಂದಾಗಿ ಈ ಕಲೆ ಉಳಿಸಿಕೊಳ್ಳುವುದೇ ಕಷ್ಟವಾಗಿದೆ ಎಂದರು.

ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣದಲ್ಲಿ ಕಳೆದ ಆರು ವರ್ಷಗಳಿಂದ ಆರು ಪೈಸೆ ಕೆಲಸವಾಗಿಲ್ಲ. ಸರ್ಕಾರದ ಯೋಜನೆಗಳಿಗೆ ಹಣ ಹೊಂದಿಸುವುದೇ ಕಷ್ಟವಾಗಿರುವಾಗ, ಯಾವುದೇ ರಂಗಾಯಣಕ್ಕೆ ಕೋಟಿ ಕೋಟಿ ಅನುದಾನ ಬರಲಿದೆ ಎಂದು ನಿರೀಕ್ಷಿಸಲಾಗದು ಎಂದರು.

ಅಲ್ಲದೇ, ವೃತ್ತಿ ರಂಗಭೂಮಿಯಲ್ಲಿ ದ್ವಂದ್ವಾರ್ಥದ ಸಂಭಾಷಣೆ, ಕರ್ಕಶ ಸಂಗೀತ, ಇನ್ನೆಂಥದೋ ನೃತ್ಯಗಳ ಮೂಲಕ ಸಮಸ್ಯೆಯಾಗಿದೆ. ವೃತ್ತಿ ರಂಗಭೂಮಿಗೆ ಈಗ ಒಂದು ವರ್ಗದ ಪ್ರೇಕ್ಷಕರು ಮಾತ್ರ ಉಳಿದಿದ್ದಾರೆ ಎಂದು ವಿಷಾದಿಸಿದರು. ಆ ಮೂಲಕ ವೃತ್ತಿ ರಂಗಭೂಮಿಯ ವಾಸ್ತವತೆಗೆ ಕನ್ನಡಿ ಹಿಡಿದರು. ಇದರ ಜೊತೆಗೆ ವೃತ್ತಿ ರಂಗಭೂಮಿಯ ಹಲವಾರು ಕಲಾವಿದರು ದುರಭ್ಯಾಸಗಳಿಗೆ ಸಿಲುಕಿದ್ದಾರೆ. ಇದರಿಂದಾಗಿ 40 - 45 ವರ್ಷವಾಗುವ ವೇಳೆಗೆ ಅವರ ದೇಹ, ಬುದ್ಧಿ ಹಾಗೂ ಮನಸ್ಸುಗಳು ವಿಕಾರವಾಗಿರುತ್ತವೆ. ವೃತ್ತಿ ರಂಗಭೂಮಿ ಕಲಾವಿದರ ನಡುಳಿಕೆ ಚೆನ್ನಾಗಿರಬೇಕು ಎಂದು ಕಿವಿಮಾತು ಹೇಳಿದರು.

## ರಾಜೀನಾಮೆ ನೀಡುವುದಾಗಿ ಘೋಷಣೆ

**(1ನೇ ಪುಟದಿಂದ)** ಎಂದು ಹೇಳಿದ್ದಾರೆ. ರಾಜೀನಾಮೆ ನೀಡುವುದಾಗಿ ಕೇಜ್ರಿವಾಲ್ ಹೇಳಿರುವುದು ನಾಟಕ ಹಾಗೂ ತಪ್ಪು ಒಪ್ಪಿಕೊಂಡಂತೆ ಎಂದು ಹೇಳಿರುವ ಬಿಜೆಪಿ, ಪಕ್ಷದ ಒಳಗಿನ ಪಕ್ಷದಲ್ಲಿನ ಆಂತರಿಕ ಬಿಕ್ಕಟಿನ ಕಾರಣದಿಂದಾಗಿ ಅವರು ರಾಜೀನಾಮೆ ನೀಡಿದ್ದಾರೆಯೇ? ಎಂದು ಪ್ರಶ್ನಿಸಿದೆ.

ದೆಹಲಿ ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಪ್ರಕರಣದಲ್ಲಿ ಕೇಜ್ರಿವಾಲ್ ಅವರಿಗೆ ಕಳೆದ ಶುಕ್ರವಾರ ಜಾಮೀನು ನೀಡಲಾಗಿತ್ತು. ಒಂದೆರಡು ದಿನಗಳಲ್ಲಿ ಆಮ್ ಆದ್ಮಿ ಪಾರ್ಟಿ ಶಾಸಕರ ಜೊತೆ ಸಭೆ ನಡೆಸುತ್ತೇನೆ. ನಂತರ ರಾಜೀನಾಮೆ ನೀಡುತ್ತೇನೆ. ಪಕ್ಷದ ಸಹೋದ್ಯೋಗಿ ಒಬ್ಬರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ನಾವು ಪ್ರಾಮಾಣಿಕವಾಗಿದ್ದೇವೆ ಎಂದು ಜನರು ತಿಳಿಸಿದ ನಂತರವೇ ಮತ್ತೆ ಮುಖ್ಯಮಂತ್ರಿಯಾಗಿ ಹಾಗೂ ಮನೀಶ್ ಸಿಸೋಡಿಯ ಉಪಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅಬಕಾರಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸೋಡಿಯ ಅವರಿಗೆ ಕಳೆದ ತಿಂಗಳು ಜಾಮೀನು ನೀಡಲಾಗಿತ್ತು.

ಕೇಜ್ರಿವಾಲ್ ಅವರ ರಾಜೀನಾಮೆ ಘೋಷಣೆಯ ನಂತರ ಈ ಸ್ಥಾನಕ್ಕೆ ಅವರ ಪತ್ನಿ ಸುನಿತಾ ಇಲ್ಲವೇ ದೆಹಲಿ ಸಚಿವರಾದ ಅತಿಶಿ ಇಲ್ಲವೇ ಗೋಪಾಲ್ ರಾಯ್ ಬರಬಹುದು ಎಂಬ ಮಾತುಗಳು ಕೇಳಿ ಬರುತ್ತಿವೆ. ದೆಹಲಿ ವಿಧಾನಸಭೆ ಅವಧಿ ಮುಂದಿನ ವರ್ಷ ಫೆಬ್ರವರಿ 23ಕ್ಕೆ ಅಂತ್ಯಗೊಳ್ಳಲಿದೆ. ಫೆಬ್ರವರಿ ಆರಂಭದಲ್ಲಿ ಚುನಾವಣೆ ನಡೆಯುವ ನಿರೀಕ್ಷೆ ಇದೆ.

## ನಗರದಲ್ಲಿ ಇಂದು ಕಾಂಗ್ರೆಸ್ ಸಭೆ

'ಸಂವಿಧಾನದ ರಕ್ಷಕ' ಕಾರ್ಯಕ್ರಮವು ದೆಹಲಿಯಲ್ಲಿ ನಡೆಯಲಿದ್ದು, ಈ ಸಂಬಂಧ ಕಾಂಗ್ರೆಸ್ ಪಕ್ಷದ ಎಸ್ಸಿ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಸಭೆಯನ್ನು ಇಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಕರೆಯಲಾಗಿದೆ ಎಂದು ಕಾಂಗ್ರೆಸ್‌ನ ಎಸ್ಸಿ ಘಟಕದ ಉತ್ತರ ಬ್ಲಾಕ್ ಅಧ್ಯಕ್ಷ ಬಿ.ಎನ್. ರಂಗನಾಥಸ್ವಾಮಿ, ಕಾರ್ಯದರ್ಶಿ ಜಿ. ರಾಕೇಶ್ ತಿಳಿಸಿದ್ದಾರೆ.

## ಮೀನು ಉತ್ಪನ್ನ ಸಹಕಾರ ಸಂಘದ ಸಭೆ

ಹರಪನಹಳ್ಳಿ

ಹರಪನಹಳ್ಳಿ. ಸೆ,15- ಮೀನು ಉತ್ಪನ್ನ ಮತ್ತು ಮಾರಾಟಗಾರರ ಸಹಕಾರ ಸಂಘದಲ್ಲಿ ಇದೇ ದಿನಾಂಕ 19ರ ಗುರುವಾರ ಬೆಳಗ್ಗೆ 11ಕ್ಕೆ ಮೀನು ಉತ್ಪನ್ನ ಮತ್ತು ಮಾರಾಟಗಾರರ ಸಹಕಾರ ಸಂಘದ ವಾರ್ಷಿಕ ಸಭೆ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಜೆ. ಯುವರಾಜನಾಯ್ಕ ತಿಳಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
1) 30x40 North 40 ಅಡಿ ರೋಡಿಗಿದೆ. MBA ಕಾಲೇಜ್ ರೋಡಿಗೆ. 2) 30x40 North, ವಿವೇಕಾನಂದ ಬಡಾವಣೆಯಲ್ಲಿ 3) 40x46 South ಕೆ.ಬಿ. ಬಡಾವಣೆಯಲ್ಲಿ ಕಿರುವಾಡಿ ಸರ್ಕಲ್ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Required Sales Persons for our Granite, tiles Showroom. 1 to 2 Years Experience. Contact. :
*Sri Lakshmi Venkateshwara Granites & Marbles*
#2002/1 to 2002/7, Taralabalu extension, Hadadi Main road, Davanagere - 577004
Email : slvgmdvg2010@gmail.com
M : 90086 60111

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಮಾರಾಟಕ್ಕಿದೆ**
ದಾವಣಗೆರೆ ಎಸ್.ಎಸ್. ಬಡಾವಣೆ ಬಾಲಾಜಿ ನಗರದಲ್ಲಿ ಮನೆ ಮಾರಾಟಕ್ಕಿದೆ. ಆಸಕ್ತರು ವಿಚಾರಿಸಲು ಕರೆ ಮಾಡುವ ನಂ.
80733 24064
ವಿಚಾರಿಸುವ ಸಮಯ : ಬೆಳಿಗ್ಗೆ 8 ರಿಂದ 9 ಗಂಟೆ

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಬೇಕಾಗಿದ್ದಾರೆ**
ಕಾಫೀ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ :
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ
94482 72734

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 30x50 North, 30x45 East 80x60 North, 30x43 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
1) ಬನಶಂಕರಿ ಲೇಔಟ್‌ನಲ್ಲಿ 30x38 West 40 ಅಡಿ ರೋಡಿಗಿದೆ. Rate - 4000/- 2) ಕರ್ನಾಟಕ ರಾಜ್ಯ ನೌಕರರ ಸಂಘದಲ್ಲಿ 30x40 South 40 ಅಡಿ ರೋಡ್ ಪಾರ್ಕ್ ಇದೆ. Rate - 3400/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**1946**
**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್, ದಾವಣಗೆರೆ.
9900438052, 9740153513

**ಸೈಟ್ ಮಾರಾಟಕ್ಕಿದೆ**
ಆನಗೋಡು ಗ್ರಾಮದ ರೀ.ಸರ್ವೆ ನಂ.227/3ರ ಉತ್ತರ-ಪೂರ್ವ ಹಾಗೂ ಉತ್ತರ-ಪಶ್ಚಿಮ ಕಾರ್ನರ್. 30*40 ಅಳತೆಯ ನಗರಾಭಿವೃದ್ಧಿ ಪ್ರಾಧಿಕಾರ/ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅನುಮೋದಿತ ಸೈಟುಗಳು ಮಾರಾಟಕ್ಕಿವೆ.
9980096866, 9741811355

**ಮನೆ ಬಾಡಿಗೆಗೆ ಇದೆ**
2BHK ಮನೆ
ಚೇತನ ಹೋಟೆಲ್ ರಸ್ತೆ, ಮೋದಿ ಕಾಂಪೌಂಡ್ ಹತ್ತಿರ.
ಸಸ್ಯಹಾರಿಗಳಿಗೆ ಮಾತ್ರ
ಮೊ : 97436 55569

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿ. : 01.10.2024 to 08.10.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ ಮಧುರೈ, ಪಳನಿ, ರಾಮೇಶ್ವರ, ಕನ್ಯಾಕುಮಾರಿ
ಕೇವಲ 15 ಸೀಟುಗಳಿವೆ ಆಸಕ್ತಿಯುಳ್ಳವರು ಕರೆಮಾಡಿ.
90086 26473, 94485 33928

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ
ಆಸಕ್ತರು ವಿಚಾರಿಸಿ :
ಮೊ. : 90367 34919

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**FLAT FOR LEASE**
3 BHK, Sqft :1888
**AM Apartment**
**Nainika Prime Rose**
Vidyanagar last city bus stop Davanagere.
89519 38228, 80502 22181

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
97388 27452
74110 25934

**ಅಡಿಕೆ ತೋಟ ಮಾರಾಟಕ್ಕಿದೆ**
ಫಸಲಿಗೆ ಬಂದಿರುವ ಮೇನ್ ರೋಡ್‌ಗೆ ಹೊಂದಿಕೊಂಡಿರುವ 2.17 ಎಕರೆ.
88612 84178

**ನೇರ ಸಂದರ್ಶನ**
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್ ಗೆ ಕ್ಯಾಷಿಯರ್ ಮಹಿಳೆಯರು ಎರಡು ಮೂರು ವರ್ಷ ಅನುಭವ, ಸರ್ವಿಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಮಹಿಳೆಯರು ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಜೆ 6 ರಿಂದ ರಾತ್ರಿ 11ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
9448980070, 8884704025

**LAND, DAIRY & POULTRY LEASE/RENT**
Land of 40 acres including Dairy, Poultry is available for Lease or Rent.
60 kms away from Davangere.
93806 10220

**ಮನೆ ಬಾಡಿಗೆಗೆ ಇದೆ**
1 BHK, ಗ್ರೌಂಡ್ ಫ್ಲೋರ್ #3893, 1ನೇ ಕ್ರಾಸ್, ವಿದ್ಯಾನಗರ ಕೆನರಾ ಬ್ಯಾಂಕ್ ಎದುರು, ದಾವಣಗೆರೆ.
98802 10699

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ರಕ್ತ ದಾನ ಶ್ರೇಷ್ಠ ದಾನ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮನೆ ಮಾರಾಟಕ್ಕಿದೆ**
ಕುಂಬಳೂರು, ಹರಿಹರ ತಾ॥, ಶಿವಮೊಗ್ಗ - ಹರಿಹರ ರಸ್ತೆ, ನಿಟ್ಟೂರು ಕ್ರಾಸ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಉತ್ತರ ದಿಕ್ಕಿನ ಮನೆ (36'x68') ಮತ್ತು ಹಳೆ ಮನೆ (36' x 20') ಮಾರಾಟಕ್ಕೆ ಇದೆ. ಒಟ್ಟು ಜಾಗದ ಅಳತೆ : 36'x88'
7892587685, 9739903499

**WANTED**
**OM DENTAL CARE**
Ram & Co Circle, Near Bank of Baroda ,Davangere.
1) Staff 2) Attender
(Full time & Part Time)
90669 93738

**ಮಳಿಗೆ ಬಾಡಿಗೆಗೆ ಇದೆ**
ಕೆಟಿಜೆ ನಗರ, 12ನೇ ಕ್ರಾಸ್, 3ನೇ ಮೇನ್, ಹದಡಿ ರಸ್ತೆಗೆ ಹೊಂದಿಕೊಂಡಿರುವ ಬಿಲ್ಡಿಂಗ್‌ನಲ್ಲಿ 9x12 ಇರುವ ಮಳಿಗೆ ಬಾಡಿಗೆಗೆ ಇದೆ, ಸ್ಥಳ ಹದಡಿ ರಸ್ತೆ ಧರ್ಮ ಹೋಟೆಲ್ ಹತ್ತಿರ, ವಿಚಾರಿಸಿ :
98457 84338
96111 74288

**ಸಿಂಗಲ್ ಬೆಡ್ರೂಮ್ ಮನೆ ಲೀಜಿಗೆ ಇದೆ**
ಬಿಸೈಡ್ ಬಾಪೂಜಿ ಬ್ಯಾಂಕ್ ಸಮುದಾಯ ಭವನ ಎಸ್ ಎಸ್ ಲೇಔಟ್ 'ಎ' ಬ್ಲಾಕ್ 5th ಕ್ರಾಸ್ ಶಾಮನೂರ್ ರೋಡ್ ನಿಯರ್ ಬಾಟಲ್ ಬಿಲ್ಡಿಂಗ್
74115 33694, 98446 32426

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ. ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
96860 22969

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**WANTED**
**CIVIL ENGINEER'S**
Freshers or with 2-3 years Experienced. Projects at Bangalore and Davangere.
80880 50729, 89711 03671

**ಮನೆ ಬಾಡಿಗೆಗೆ ಇದೆ**
ಶ್ರೀ ಜೆ.ಹೆಚ್. ಪಟೇಲ್ ಬಡಾವಣೆ, 'ಸಿ' ಬ್ಲಾಕ್, ಶಾಮನೂರು ಹತ್ತಿರ, First floor 30x40, 2 BHK, Second Floor - Room- ಅಟ್ಯಾಚ್ಡ್ ಬಾತ್ ರೂಮ್
98863 84948

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. **(Only for Veg)**
Vidyanagar last city bus stop, Davangere
8951938228, 8050222181

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಹುಡುಗರು ಬೇಕಾಗಿದ್ದಾರೆ**
SSLC., ITI or Diploma ಪಾಸ್ / ಫೇಲ್ ಅಭ್ಯರ್ಥಿಗಳು ಸಿಸಿಟಿವಿ ಕೆಲಸಕ್ಕೆ, ಎಲೆಕ್ಟ್ರೀಷಿಯನ್ ಬೇಕಾಗಿದ್ದಾರೆ. ನಗರವಾಸಿಗಳಿಗೆ ಮೊದಲ ಆದ್ಯತೆ.
8722113803, 9611877204

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

# ಮೀಸಲಾತಿ : ರಾಹುಲ್‌ಗಾಂಧಿ ಹೇಳಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ



ದಾವಣಗೆರೆ, ಸೆ. 15- ಮೀಸಲಾತಿ ರದ್ದುಪಡಿಸುವಂತೆ ನೀಡಿರುವ ಲೋಕಸಭಾ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಮೆರಿಕಾದ ಜಾರ್ಜ್ ಟೌನ್‌ನ ವಿವಿಯಲ್ಲಿ ನೀಡಿರುವ ಹೇಳಿಕೆಯನ್ನು ಖಂಡಿಸಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ನಿನ್ನೆ ಪ್ರತಿಭಟನೆ ನಡೆಸಿದರು.

ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಮೆರವಣಿಗೆ ಮೂಲಕ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿದ ಬಿಜೆಪಿ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಬಿಜೆಪಿ ಮುಖಂಡರು, ಸಿಎಂ ಸಿದ್ದರಾಮಯ್ಯ ಅವರು ಎಸ್ಸಿ, ಎಸ್ಟಿ ಗಳ 25 ಸಾವಿರ ಕೋಟಿ ಹಣವನ್ನು ಬೇರೆ ಬೇರೆ ಇಲಾಖೆಗಳಿಗೆ ವರ್ಗಾವಣೆ ಮಾಡಿದ್ದಾರೆ.

ಇದು ಕೂಡ ಎಸ್ಸಿ, ಎಸ್ಟಿಗಳಿಗೆ ಮಾಡಿದ ಘೋರ ಅನ್ಯಾಯವಾಗಿದೆ. ಎಸ್ಸಿ, ಎಸ್ಟಿಗಳ ಅಭಿವೃದ್ಧಿಗಾಗಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಇದ್ದ ಹಣವನ್ನು ಬಳ್ಳಾರಿ ಚುನಾವಣೆಗೆ ಬಳಸಿದ್ದಾರೆ. 187 ಕೋಟಿ ಹಣವನ್ನು ಲೂಟಿ ಮಾಡಿದ್ದಾರೆಂದು ಆರೋಪಿಸಿದರು.

ಪತ್ರಿಭಟನೆಯಲ್ಲಿ ಗಾಯತ್ರಿ ಸಿದ್ಧೇಶ್ವರ, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್, ಮಾಜಿ ಶಾಸಕರಾದ ಎಂ. ಬಸವರಾಜನಾಯ್ಕ, ಎಸ್.ವಿ. ರಾಮಚಂದ್ರ, ಹೆಚ್.ಪಿ. ರಾಜೇಶ್, ಮುಖಂಡರಾದ ಶ್ರೀನಿವಾಸ ದಾಸಕರಿಯಪ್ಪ, ಲೋಕಿಕೆರೆ ನಾಗರಾಜ್, ಎಸ್.ಟಿ. ವೀರೇಶ್, ರಾಜನಹಳ್ಳಿ ಶಿವಕುಮಾರ್, ಅಣ್ಣೇಶ್, ಅನಿಲ್ ನಾಯ್ಕ, ಶಶಿಕುಮಾರ್, ಹೆಚ್.ಸಿ. ಜಯಮ್ಮ, ಬಿ.ಟಿ. ಸಿದ್ಧಪ್ಪ, ಮಂಜಾನಾಯ್ಕ, ಕೃಷ್ಣಕುಮಾರ್, ಜಿ.ವಿ. ಗಂಗಾಧರ್, ರಮೇಶ್, ಫಣಿಯಾಪುರ ಲಿಂಗರಾಜ್ ಮತ್ತಿತರರು ಭಾಗವಹಿಸಿದ್ದರು.

# ಮಹಾಸಭಾಕ್ಕೆ ಆಯ್ಕೆ : ಎಸ್ಸೆಸ್‌ಗೆ ಶ್ರೀಶೈಲ ಶ್ರೀ ಗುರುರಕ್ಷೆ



ದಾವಣಗೆರೆ, ಸೆ. 15 - ಅಖಿಲ ಭಾರತ ವೀರಶೈವ ಮಹಾ ಸಭೆಗೆ ಸತತ ಮೂರನೇ ಬಾರಿಗೆ ಆಯ್ಕೆಯಾಗಿರುವ ಶಾಮನೂರು ಶಿವಶಂಕರಪ್ಪ ಅವರು ನಗರದ ಶ್ರೀಶೈಲ ಮಠಕ್ಕೆ ಇಂದು ಭೇಟಿ ನೀಡಿ, ಶ್ರೀಶೈಲ ಪೀಠದ ಜಗದ್ಗುರುಗಳಿಂದ ಆಶೀರ್ವಾದ ಪಡೆದರು.

ಎಸ್ಸೆಸ್ ಅವರು ತಮ್ಮ ಅವಧಿಯಲ್ಲಿ ಸಾಕಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದು, ಮತ್ತಷ್ಟು ಸಮಾಜ ಸಂಘಟನೆ ತಮ್ಮಿಂದಾಗಲಿ ಎಂದು ಜಗದ್ಗುರುಗಳು ಹಾರೈಸಿದರು. ಈ ಸಂದರ್ಭದಲ್ಲಿ ಕೈಗಾರಿಕೋದ್ಯಮಿ ಡಾ. ಅಥಣಿ ವೀರಣ್ಣ, ಆರ್.ಟಿ. ಪ್ರಶಾಂತ್ ದುಗ್ಗತ್ತಿಮಠ್, ತ್ಯಾವಣಿಗೆ ಮಲ್ಲಿಕಾರ್ಜುನ, ಎನ್.ಎಂ. ತಿಪ್ಪೇಸ್ವಾಮಿ, ಹರೀಶ್, ದೇವರಮನಿ ಯೋಗಿಶ್, ರುದ್ರಮುನಿ, ಬನ್ನಯ್ಯ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

# ಆನಗೋಡಿನ ರೈತ ಸ್ಮಾರಕ ಭವನಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಲು ಸಚಿವರಿಗೆ ಮನವಿ



ದಾವಣಗೆರೆ, ಸೆ. 15 - ಇಲ್ಲಿಗೆ ಸಮೀಪದ ಆನಗೋಡಿನಲ್ಲಿ ರೈತ ಹುತಾತ್ಮರ ಸ್ಮರಣಾರ್ಥ ಸಮಿತಿಯ ಹೋರಾಟದ ಫಲವಾಗಿ ನಿರ್ಮಾಣಗೊಂಡಿರುವ ರೈತ ಸ್ಮಾರಕ ಭವನಕ್ಕೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಮತ್ತು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರುಗಳಿಗೆ ಲಿಖಿತ ಮನವಿ ಪತ್ರ ಸಲ್ಲಿಸಿದರು.

ಮೊನ್ನೆ ನಡೆದ ರೈತ ಸ್ಮಾರಕ ಭವನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಚಿವರು ಮತ್ತು ಸಂಸದರು ಹಾಗೂ ಶಾಸಕ ಕೆ.ಎಸ್.ಬಸವಂತಪ್ಪ ಅವರುಗಳಿಗೆ ಸಮಿತಿ ಅಧ್ಯಕ್ಷ ಎನ್. ಜಿ. ಪುಟ್ಟಸ್ವಾಮಿ, ಗೌರವಾಧ್ಯಕ್ಷ ಹೆಚ್. ನಂಜುಂಡಪ್ಪ, ರೈತ ಮುಖಂಡ ಶಾಮನೂರು ಹೆಚ್.ಆರ್. ಲಿಂಗರಾಜ್ ಮತ್ತು ಇತರರು ಮನವಿ ಪತ್ರ ಅರ್ಪಿಸಿದರು.

ಸ್ಮಾರಕ ಭವನಕ್ಕೆ ಸಂಪರ್ಕ ರಸ್ತೆ ಕಲ್ಪಿಸುವುದು, ರೈತ ಸಮುದಾಯ ಭವನ ಮತ್ತು ಅದಕ್ಕೆ ಹೊಂದಿಕೊಂಡಂತೆ 10 ಕೊಠಡಿಗಳನ್ನು ನಿರ್ಮಿಸುವುದು, ಸ್ಮಾರಕ ಭವನಕ್ಕೆ ನೀರಿನ ಸೌಕರ್ಯ ಕಲ್ಪಿಸುವುದು, ರೈತ ವಸ್ತು ಸಂಗ್ರಹಾಲಯವನ್ನು ನಿರ್ಮಿಸುವಂತೆ ಅವರು ಕೇಳಿಕೊಂಡಿದ್ದಾರೆ.

# ಹಿಂದಿ ಸಪ್ತಾಹ ಆಚರಣೆ ವಿರೋಧಿಸಿ ಕರವೇ ಪ್ರತಿಭಟನೆ




ದಾವಣಗೆರೆ, ಸೆ.15- ಹಿಂದಿ ಸಪ್ತಾಹ ಆಚರಣೆ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ಕಾರ್ಯಕರ್ತರು ಕಪ್ಪು ಪಟ್ಟಿ ಧರಿಸಿ ನಗರದ ಲೋಕೋಪಯೋಗಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ಮೂಲಕ ಕರಾಳ ದಿನವನ್ನಾಗಿ ಆಚರಿಸಲಾಯಿತು.

ಇದೇ ವೇಳೆ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ 22 ಅಧಿಕೃತ ಭಾಷೆಗಳಿವೆ. ಅದರಲ್ಲಿ ಹಿಂದಿ ಭಾಷೆಯೂ ಒಂದು. ಹಲವು ದಶಕಗಳಿಂದ ಹಿಂದಿ ರಾಷ್ಟ್ರಭಾಷೆ ಎಂದು ಸುಳ್ಳು ಹೇಳುತ್ತಾ ಬರಲಾಗಿದೆ. ಆದರೆ ಕರವೇ ಹೋರಾಟದಿಂದಾಗಿ ಇತ್ತೀಚಿಗೆ ಕೇಂದ್ರ ಸರ್ಕಾರದ ಸಚಿವರು ಹಿಂದಿ ರಾಷ್ಟ್ರಭಾಷೆ ಅಲ್ಲ ಎಂದು ಸ್ಪಷ್ಟನೆ ನೀಡಿದ್ದರೂ ಸಹ ಹಿಂದಿ ಸಪ್ತಾಹ ಆಚರಣೆ ಖಂಡನೀಯ ಎಂದರು.

ಭಾರತ ಎಂದಾಕ್ಷಣ ಬರೀ ಹಿಂದಿ ಭಾಷಿಕರು ಎಂದಲ್ಲ. ರಾಜ್ಯವಾರು ಆಯಾ ಸ್ಥಳೀಯ ಭಾಷೆ, ಸ್ಥಳೀಯ ಸಂಸ್ಕೃತಿಯಲ್ಲಿ ವ್ಯತ್ಯಾಸವಿದ್ದರೂ ಕೇಂದ್ರ ಸರ್ಕಾರ ನಮ್ಮ ರಾಜ್ಯದ ಭಾಷೆ ಮೇಲೆ ದಬ್ಬಾಳಿಕೆ ನಡೆಸುತ್ತಾ ಬರುತ್ತಿದೆ ಎಂದು ಹೇಳಿದರು.

2005 ರಿಂದಲೂ ಸೆಪ್ಟಂಬರ್ 14 ರಂದು ಪ್ರತಿವರ್ಷ ಕೇಂದ್ರ ಸರ್ಕಾರ ಹಿಂದಿ ಸಪ್ತಾಹ ಆಚರಣೆ ಮಾಡುತ್ತಾ ಬಂದಿದೆ. ಇದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರತಿ ವರ್ಷ 14 ರಂದು ಹೋರಾಟ ಮಾಡುತ್ತಾ ಬಂದಿದೆ. ಬ್ಯಾಂಕುಗಳಲ್ಲಿ, ಅಂಚೆ ಕಚೇರಿ, ಬಿಎಸ್ಸೆನ್ನೆಲ್ ಹಾಗೂ ಕೇಂದ್ರೀಯ ವಿದ್ಯಾಶಾಲೆಗಳಲ್ಲಿ ಮತ್ತು ಸಿಬಿಎಸ್‌ಇ ಶಾಲೆಗಳಲ್ಲಿ ಹಿಂದಿ ಸಪ್ತಾಹ ಆಚರಣೆ ನಡೆಸುತ್ತಾ ಬರಲಾಗಿದೆ ಎಂದರು.

## ಕರಾಳ ದಿನಾಚರಣೆ

ಬೀರೂರು-ಸಮ್ಮಸಗಿಗೆ ಹೋಗುವ ರಸ್ತೆಯ ಮಾರ್ಗಸೂಚಿಗಳು ಮತ್ತು ನಾಮ ಫಲಕಗಳು ಹಿಂದಿಯಲ್ಲೇ ಬರೆಸಿರುವುದು ಕನ್ನಡ ನಾಡಿಗೆ ಮಾಡುವ ದೊಡ್ಡ ಅವಮಾನವಾಗಿದೆ. ರಾಜ್ಯದ ಆಡಳಿತ ಭಾಷೆ ಕನ್ನಡ ಅದರಲ್ಲೂ ಇತ್ತೀಚಿಗೆ ಶೇ. 60 ರಷ್ಟು ಕನ್ನಡದಲ್ಲಿ ಇರಬೇಕು ಎಂಬ ಆದೇಶವಿದ್ದರೂ ಸಹ ರಾಜ್ಯ ಹೆದ್ದಾರಿಗಳಲ್ಲಿ ಮಾರ್ಗಸೂಚಿ ಹಾಗೂ ನಾಮಫಲಕಗಳು ಕನ್ನಡದಲ್ಲಿ ಶೇ.60 ರಷ್ಟು ಇದ್ದು ಹೊರ ರಾಜ್ಯದವರಿಗೆ ಅರ್ಥವಾಗುವ ರೀತಿಯಲ್ಲಿ ಸಣ್ಣದಾಗಿ ಆಂಗ್ಲಭಾಷೆಯಲ್ಲಿ ಬರೆಸಿದರೆ ಸಾಕು. ಆದರೆ ಅಧಿಕಾರಿ ವರ್ಗದವರು ಹಿಂದಿ ಭಾಷೆಯಲ್ಲಿ ಮಾರ್ಗಸೂಚಿಗಳು ಹಾಗೂ ಊರುಗಳ ಹೆಸರು ಬರೆಸಿದೆ. ಇದನ್ನು ಕರ್ನಾಟಕ ರಕ್ಷಣಾ ವೇದಿಕೆ ಖಂಡಿಸುವ ಮೂಲಕ ಅಂತವುಗಳಿಗೆ ಮಸಿ ಬಳಿಯಲಾಗುವುದು ಎಂದು ಎಚ್ಚರಿಸಿದರು.

ಯುಗಧರ್ಮ ರಾಮಣ್ಣ, ಕರವೇ ಪದಾಧಿಕಾರಿಗಳಾದ ಎನ್. ಟಿ.ಹನುಮಂತಪ್ಪ, ಎನ್.ಬಿ. ಲೋಕೇಶ್, ಜಬೀವುಲ್ಲಾ, ಖಾದರ್ ಬಾಷಾ, ಮುಸ್ತಾಫ್, ಆಟೋ ರಫೀಕ್, ತನ್ವೀರ್, ಸುರೇಶ್, ಸಂಜು, ನಾಗರರಾಜಪ್ಪ, ರಾಜು, ಅಕ್ಷಯ್, ಪ್ರಕಾಶ್, ಸಾಗರ್, ದಾದಾಪೀರ್, ಬಸವರಾಜ್, ಹರಿಹರ ರಾಜೇಶ್, ಅಮಾನುಲ್ಲಾ ಖಾನ್, ಇಮ್ತಿಯಾಜ್, ಶಶಿನಾಯ್ಕ, ರುದ್ರೇಶ್, ಕೋಡಿಹಳ್ಳಿ ಗಂಗಾಧರ್, ಮಂಜುಳಾ ಗಣೇಶ್, ನಾಗಮ್ಮ, ರವಿಚಂದ್ರ, ರವಿಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಮಲೇಬೆನ್ನೂರಿನಲ್ಲಿ ಗಮನ ಸೆಳೆದ ಬೃಹತ್ ಮಾನವ ಸರಪಳಿ





ಮಲೇಬೆನ್ನೂರು, ಸೆ. 15 - ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸರ್ಕಾರದ ನಿರ್ದೇಶನದಂತೆ ಭಾನುವಾರ ಬೆಳಿಗ್ಗೆ 8.30ರಿಂದ 10 ಗಂಟೆಯವರೆಗೆ ಕೊಮಾರನಹಳ್ಳಿ ಸಮೀಪ ಇರುವ ಹೊನ್ನಾಳಿ ತಾಲ್ಲೂಕಿನ ಗಡಿ ಭಾಗದಿಂದ ಹರಿಹರ ನಗರದವರೆಗೂ ಬೃಹತ್ ಉದ್ದದ ಮಾನವ ಸರಪಳಿ ನಿರ್ಮಿಸಿ, ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ವಾಚನ ಮಾಡುವ ಮೂಲಕ ಎಲ್ಲರ ಗಮನ ಸೆಳೆಯಲಾಯಿತು.

ಕೊಮಾರನಹಳ್ಳಿ ಮಲೇಬೆನ್ನೂರು, ಕುಂಬಳೂರು, ನಂದಿತಾವರೆ, ಎಕ್ಕೆಗೊಂದಿ ಕ್ರಾಸ್, ಬೆಳ್ಳೂಡಿ, ಹರಿಹರ ಬೈಪಾಸ್‌ವರೆಗೆ ಮಾನವ ಸರಪಳಿ ನಿರ್ಮಾಣವಾಗಿತ್ತು.

ಸ್ಥಳೀಯ ಜನ ಪ್ರತಿನಿಧಿಗಳು, ಸಾರ್ವಜನಿಕರು, ಸ್ತ್ರೀ-ಸ್ವಸಹಾಯ ಸಂಘಗಳ ಮಹಿಳೆಯರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು ಬೆಸ್ಕಾಂ, ಕಂದಾಯ, ಶಿಕ್ಷಣ, ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ಈ ಬೃಹತ್ ಮಾನವ ಸರಪಳಿಯಲ್ಲಿ ಭಾಗಿಯಾಗಿ ಪ್ರಜಾಪ್ರಭುತ್ವವನ್ನು ಬಲಗೊಳಿಸುವ ಸಂಕಲ್ಪ ಮಾಡಿದರು. ಬೆಳಿಗ್ಗೆ ಬಿಸಲಿನ ಚುರುಕನ್ನು ಲೆಕ್ಕಿಸದೇ ಎಲ್ಲರೂ ಪ್ರಜಾಪ್ರಭುತ್ವದ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದು, ವಿಶೇಷವಾಗಿತ್ತು.

## ಎಲ್ಲರಿಗೂ ಬಿಸ್ಕತ್ತು, ನೀರು, ನೀಡಿದ ಕುಂಬಳೂರಿನ ಮಹೇಂದ್ರ ದಂಪತಿ

ಕಂಬಳೂರಿನ ಎಂ.ಹೆಚ್. ಮಹೇಂದ್ರ ಹಾಗೂ ಎಂ.ಹೆಚ್. ರಮೇಶ್ ಅವರು ಮಾನವ ಸರಪಳೆಯಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಬಿಸ್ಕತ್ತು, ನೀರು ವಿತರಿಸಿದರು.

ತಹಶೀಲ್ದಾರ್ ಗುರುಬಸವರಾಜ್, ಬಿಇಓ ದುರುಗಪ್ಪ, ತಾ.ಪಂ. ಇಓ ಸುಮಲತಾ, ಡಿವೈಎಸ್ಪಿ ಬಸವರಾಜ್, ಸಿಪಿಐ ಸುರೇಶ್ ಸಗರಿ, ಪಿಎಫ್‌ಐ ಪ್ರಭು ಕೆಳಗಿನ ಮನಿ, ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್ ಸೇರಿದಂತೆ ಇನ್ನೂ ಅನೇಕ ಅಧಿಕಾರಿಗಳು ಮೇಲುಸ್ತುವಾರಿ ನೋಡಿಕೊಂಡರು.

# ತರಳಬಾಳು ಶಾಲೆಯಲ್ಲಿ ಗೀತ ಗಾಯನ ಸ್ಪರ್ಧೆ



ದಾವಣಗೆರೆ, ಸೆ. 15 - ನಗರದ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಶ್ರೀ ತರಳಬಾಳು ರೆಸಿಡೆನ್ಸಿಯಲ್ ಶಾಲೆಯಲ್ಲಿ ಗೀತ ಗಾಯನ (ದೇಶಭಕ್ತಿ ಗೀತೆ) ಸ್ಪರ್ಧೆಯನ್ನು ನಡೆಸಲಾಯಿತು. ಈ ಸ್ಪರ್ಧೆಯಲ್ಲಿ ಒಟ್ಟು 8 ಶಾಲೆಯ ಮಕ್ಕಳು ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ.

ಕೊಂಡಜ್ಜಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಕೆ. ದಿನೇಶ್ ಶೆಟ್ಟಿ, ಜಿಲ್ಲಾ ಆಯುಕ್ತರಾದ (ಗೈಡ್) ಶಾರದಾ ಮಾಗಾನಹಳ್ಳಿ, ಜಿಲ್ಲಾ ಸಂಸ್ಥೆಯ ಶ್ರೀಮತಿ ಅಶ್ವಿನಿ, ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ರವೀಂದ್ರ ಸ್ವಾಮಿ ಟಿ.ಎಂ. ಹಾಗೂ ತೀರ್ಪುಗಾರರಾಗಿ ಜ್ಯೋತಿ ಬಿ. ಅಂಗಡಿ, ಸುಜಾತ, ಗೈಡ್ ಕ್ಯಾಪ್ಟನ್ಸ್ ಅನಿತಾ, ಭಾವನ, ಸುಜಾತ, ರಜಿನಿ, ದೀಪಿಕಾ, ಸ್ಕೌಟ್ ಮಾಸ್ಟರ್ ಆದ ವಿಜಯ್ ಕುಮಾರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಾಲ್ಮೀಕಿ ಜಯಂತಿ : ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಸೆ. 15 - ರಾಜ್ಯ ಸರ್ಕಾರದ ವತಿಯಿಂದ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಬರುವ ಅಕ್ಟೋಬರ್ 17 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತದೆ. ಈ ಜಯಂತಿ ಸಂದರ್ಭದಲ್ಲಿ ಪರಿಶಿಷ್ಟ ಪಂಗಡ ಜನಾಂಗದ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಹಾಗೂ ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಅರ್ಹ ವ್ಯಕ್ತಿಗಳಿಗೆ ಶ್ರೀ ಮಹರ್ಷಿ ವಾಲ್ಮೀಕಿ ರವರ ಸ್ಮರಣಾರ್ಥ ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕೊಠಡಿ ಸಂಖ್ಯೆ 45, ಎರಡನೇ ಮಹಡಿ. ಜಿಲ್ಲಾಡಳಿತ ಭವನ, ದಾವಣಗೆರೆ. ಇಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ, ನಾಡಿದ್ದು ದಿನಾಂಕ 17 ರ ಒಳಗಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಸಂಪರ್ಕಿಸಲು ಕಲ್ಯಾಣಾಧಿಕಾರಿ ನವೀನ್ ಸಿ.ಮಠದ್ ತಿಳಿಸಿದ್ದಾರೆ.

# ಇಂದಿನ ಪ್ರತಿಭಾ ಪುರಸ್ಕಾರ ಮುಂದೂಡಿಕೆ

ದಾವಣಗೆರೆಯಲ್ಲಿ ಇಂದು ನಡೆಯಬೇಕಾಗಿದ್ದ 'ಅಂಬಿಗರ ಸಂಭ್ರಮ' ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮುಂದೂಡಲಾಗಿದೆ ಎಂದು ಜಿಲ್ಲಾ ಗಂಗಾ ಮತಸ್ಥರ (ಬೆಸ್ತರ) ಸಂಘದ ಪ್ರಧಾನ ಕಾರ್ಯದರ್ಶಿ ಜೆ. ಉಮೇಶ್ ತಿಳಿಸಿದ್ದಾರೆ.

ಈದ್‌ಮಿಲಾದ್ ಶುಭಾಶಯಗಳು



ನಾಡಿನ ಸಮಸ್ತ ಜನತೆಗೆ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್ ಪೈಗಂಬರ್‌ರವರ ಜನ್ಮದಿನ ಈದ್‌ಮಿಲಾದ್ ಶುಭಾಶಯಗಳು.



ಎಂ.ಆರ್. ಸಾಧಿಕ್
ಮಾಜಿ ಅಧ್ಯಕ್ಷರು,
ದಾವಣಗೆರೆ ಮಂಡಕ್ಕಿ ಉತ್ಪಾದಕರ ಕ್ಷೇಮಾಭಿವೃದ್ಧಿ ಸಂಘ,
ದಾವಣಗೆರೆ.

# ಕೆಲವೇ ವರ್ಷಗಳಲ್ಲಿ ಐಎಎಸ್ ಹಬ್ ಆಗಿ ದಾವಣಗೆರೆ



ದಾವಣಗೆರೆ, ಸೆ.15- ಮುಂದಿನ ಹತ್ತು ವರ್ಷಗಳಲ್ಲಿ ಭಾರತ ದೇಶದಲ್ಲಿ ಐಎಎಸ್ ಹಬ್ ಆಗಿ ದಾವಣಗೆರೆ ರೂಪುಗೊಳ್ಳಲಿದೆ ಎಂದು ಇನ್ ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಜಾಧವ್ ಕಾಂಪ್ಲೆಕ್ಸ್‌ನಲ್ಲಿ ಇಂದು ಏರ್ಪಾಡಾಗಿದ್ದ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ದಾವಣಗೆರೆ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಪೂಜೆ ಸಲ್ಲಿಸಿದ ಬಳಿಕ ಅವರು ಮಾತನಾಡಿದರು.

ಇನ್‌ಸೈಟ್ಸ್ ಸಂಸ್ಥೆಯು ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ನಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿದೆ. ದಾವಣಗೆರೆ ಶಿಕ್ಷಣ ಕಾಶಿ, ಕೈಗಾರಿಕಾ ನಗರಿಯೆಂದು ಕೀರ್ತಿ ಪಡೆದಿದ್ದು, ಮುಂದೆ ದಾವಣಗೆರೆ ಐಎಎಸ್ ಫ್ಯಾಕ್ಟರಿ ಆಗಿ ಬೆಳೆಯಲಿದೆ ಎಂದು ಹೇಳಿದರು.

ಲೋಕಸಭೆ ಚುನಾವಣೆ ವೇಳೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಹೋದಾಗ ಸರ್ಕಾರಿ ಅಧಿಕಾರಿಗಳು ಆಗಬೇಕೆಂದು ಹೇಳಿದ್ದೆ. ಆರ್ಥಿಕವಾಗಿ ಹಿಂದುಳಿದವರು, ಅಹಿಂದ ಸೇರಿದಂತೆ ಎಲ್ಲಾ ವರ್ಗದ ಬಡವರಿಗೆ ರಿಯಾಯಿತಿ ದರದಲ್ಲಿ ಐಎಎಸ್, ಕೆಎಎಸ್ ಕೋಚಿಂಗ್ ನೀಡಲಾಗುತ್ತದೆ ಎಂದರು.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 10 ವಿದ್ಯಾರ್ಥಿಗಳಂತೆ ಒಟ್ಟು ಜಿಲ್ಲೆಯ 80 ವಿದ್ಯಾರ್ಥಿಗಳಿಗೆ ಮುಂದಿನ ವರ್ಷದ ಜನವರಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡುವ ಯೋಜನೆ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

2016 ರಲ್ಲಿ ಕೆ.ಆರ್. ನಂದಿನಿ ಎಂಬ ವಿದ್ಯಾರ್ಥಿನಿ ದೇಶಕ್ಕೆ ರ್‍ಯಾಂಕ್ ಬಂದ ಬಳಿಕ ಇನ್‌ಸೈಟ್ಸ್ ಸಂಸ್ಥೆಯತ್ತ ಎಲ್ಲರ ಚಿತ್ತ ನೆಟ್ಟಿತು. ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದಿದ್ದ ನಾಲ್ವರು ಜಿಲ್ಲಾಧಿಕಾರಿಗಳಾಗಿದ್ದಾರೆ,

ಆಗುತ್ತಲೂ ಇದ್ದಾರೆ. ಐಎಎಸ್, ಕೆಎಎಸ್ ಕೇವಲ ಪ್ರತಿಷ್ಠೆಗಾಗಿ ಆಗುವುದಲ್ಲ, ಜನರ ಸೇವೆಗಾಗಿ ಆಯ್ದುಕೊಳ್ಳುವ ಕ್ಷೇತ್ರ ಎಂದು ಹೇಳಿದರು.

ಜಮ್ಮು - ಕಾಶ್ಮೀರ, ಬೆಂಗಳೂರು ಸೇರಿದಂತೆ ಹಲವೆಡೆ ಸಂಸ್ಥೆಯು ಶಾಖೆಗಳನ್ನು ಹೊಂದಿದ್ದು, ದೇಶದಲ್ಲಿಯೇ ಮೂರನೆ ಸ್ಥಾನದಲ್ಲಿದೆ ಎಂಬ ಹೆಗ್ಗಳಿಕೆ ಹೊಂದಿದೆ. ಬೇರೆ ಬೇರೆ ರಾಜ್ಯಗಳ ವಿದ್ಯಾರ್ಥಿಗಳು ಸಂಸ್ಥೆಗೆ ಸೇರ್ಪಡೆಯಾಗುತ್ತಿದ್ದಾರೆ. ಗುಣಮಟ್ಟದ ಕೋಚಿಂಗ್ ನೀಡುತ್ತಿರುವುದೇ ಇದಕ್ಕೆ ಕಾರಣ ಎಂದು ತಿಳಿಸಿದರು.

ನಿವೃತ್ತ ಪ್ರಾಂಶುಪಾಲ ಹದಡಿ ಯಲ್ಲಪ್ಪ ಕಕ್ಕರಗೊಳ್ಳ, ಉಪನ್ಯಾಸಕ ಮಳಲ್ಕೆರೆ ಓಬಳೇಶ್, ಉಪನ್ಯಾಸಕ ಷಣ್ಮುಖಪ್ಪ ಅವರುಗಳು ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗಗನ ಕುಸುಮವಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ಸುಲಭವಾಗಿ ಸಿಗುವಂತೆ ಮಾಡಿದ ಹೆಗ್ಗಳಿಕೆ ವಿನಯ್ ಕುಮಾರ್‌ಗೆ ಸಲ್ಲುತ್ತದೆ ಎಂದರು.

ಈ ವೇಳೆ ಇನ್‌ಸೈಟ್ಸ್ ಸಂಸ್ಥೆಯ ಎಂ.ಡಿ. ಶರತ್ ಕುಮಾರ್, ಕರಿಬಸಯ್ಯ ಮಠದ್, ಶಿವಮೂರ್ತಿ, ಶಿವಕುಮಾರ ಸಂಬಳಿ ಮನು, ಆಕಾಶ್, ಅಯ್ಯಣ್ಣ, ಶ್ವೇತಾ ಒಡೆಯರ್ ಸೇರಿದಂತೆ ಇತರರು ಹಾಜರಿದ್ದರು. ಪುರಂದರ ಲೋಕಿಕೆರೆ ಸ್ವಾಗತಿಸಿದರು.

## ಸೈಲೆಂಟ್ ಆಗಿ ಹೊಡೆದು ಹಾಕಬೇಕು

ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದೆ. ಆಗ ಹಳ್ಳಿ ಹಳ್ಳಿಗಳಿಗೂ ಹೋಗಿದ್ದೆ. ರಾಜಕಾರಣದಲ್ಲಿ ಸೈಲೆಂಟ್ ಆಗಿ ಹೊಡೆದು ಹಾಕಬೇಕು ಎಂಬುದು ಮನದಟ್ಟಾಗಿದೆ. ಎಲೆಕ್ಷನ್ ಸೈಲೆಂಟ್ ಆಗಲಿಲ್ಲ. ಲೋಕಸಭೆ ಚುನಾವಣೆಯಲ್ಲಿ ಗೆಲ್ಲಲಿಲ್ಲ. ಸೇವೆ ಮಾಡಲು ಲೋಕಸಭೆಗೆ ಹೋಗಬೇಕೆಂದೇನಿಲ್ಲ. ನಮಗೆ ಇಚ್ಛಾಶಕ್ತಿ, ಜನಸೇವೆ ಮಾಡಬೇಕೆಂಬ ಗುರಿ ಇದ್ದರೆ ಸಾಕು. ದಾವಣಗೆರೆ ಮುಂಬರುವ ದಿನಗಳಲ್ಲಿ ಯಾವ ಮಟ್ಟದಲ್ಲಿ ಬೆಳೆಯುತ್ತದೆ ಎಂಬುದನ್ನು ಕಾದು ನೋಡಿ.

**- ಜಿ.ಬಿ. ವಿನಯ್ ಕುಮಾರ್,**
**ಇನ್ ಸೈಟ್ಸ್ ಸಂಸ್ಥೆ ಸಂಸ್ಥಾಪಕರು**

# ಜಿಮ್ ಫಿಟ್ನೆಸ್, ಬ್ಯೂಟೀಷಿಯನ್, ಚಾಟ್ಸ್ ತಯಾರಿಕೆ ತರಬೇತಿ


ದಾವಣಗೆರೆ, ಸೆ. 15 - ಪರಿಶಿಷ್ಟ ಜಾತಿ ಯುವಕ, ಯುವತಿಯರಿಗೆ ಯುವಜನರನ್ನು ಸ್ವಾವಲಂಭಿಯಾಗಿ ಉತ್ತೇಜಿಸುವ ದೃಷ್ಟಿಯಿಂದ ಜಿಮ್ ಫಿಟ್ನೆಸ್, ಬ್ಯೂಟೀಷಿಯನ್, ಚಾಟ್ಸ್ ತಯಾರಿಕಾ ತರಬೇತಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿ ಇರುವ ಪರಿಶಿಷ್ಟ ಜಾತಿ ಯುವಕ, ಯುವತಿಯರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ವೇಳೆಯಲ್ಲಿ ಅರ್ಜಿ ನಮೂನೆಯನ್ನು ಪಡೆದು ಇದೇ ದಿನಾಂಕ 17 ರ ಒಳಗಾಗಿ ಸಲ್ಲಿಸಬೇಕು..

ಹೆಚ್ಚಿನ ವಿವರಗಳಿಗೆ ದೂ.ಸಂ. 08192-237480 ಸಂಪರ್ಕಿಸಲು ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

ಈದ್ ಮಿಲಾದ್ ಹಬ್ಬದ ಶುಭಾಶಯಗಳು


ನಮ್ಮ ದಾವಣಗೆರೆ ಜಿಲ್ಲೆಯ ಸಮಸ್ತ ಜನತೆಗೆ ಹಾಗೂ ಆಲಾಮೀನ್‌ಗೆ ಈದ್ ಮಿಲಾದ್ ಹಬ್ಬದ ಹಾರ್ದಿಕ ಶುಭಾಶಯಗಳು...



ದಸ್ತಗೀರ್ ಎಸ್. ಅಸಾದುಲ್ಲಾ
ಅಧ್ಯಕ್ಷರು, ಕನ್ನಡ ನಾಡು ಜನತಾ ಸಮಿತಿ
ದಾವಣಗೆರೆ.

ಈದ್ ಮಿಲಾದ್ ಶುಭಾಶಯಗಳು

ನಗರದ ಸಮಸ್ತ ನಾಗರಿಕರಿಗೆ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ವ ಸ್ವಲ್ಲಮ್ ಪೈಗಂಬರ್‌ರವರ ಜನ್ಮದಿನ ಈದ್ ಮಿಲಾದ್ ಹಬ್ಬದ ಶುಭಾಶಯಗಳು



ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು
ತಂಜೀಮುಲ್-ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ (ರಿ)
ನೂರಾನಿ ಶಾದಿ ಮಹಲ್, ಜೆ. ಇಮಾಂ ನಗರ, ದಾವಣಗೆರೆ.

# ಕನ್ನಡ ಸಾಹಿತ್ಯ ಲೋಕಕ್ಕೆ ವಿಶ್ವ ಮಾನ್ಯತೆ ತಂದಿದ್ದು ವಚನ ಸಾಹಿತ್ಯ

### ಶಸಾಪ ವಾರ್ಷಿಕ ಸಭೆಯಲ್ಲಿ ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ



ದಾವಣಗೆರೆ, ಸೆ.15- ಕನ್ನಡ ಸಾಹಿತ್ಯ ಲೋಕಕ್ಕೆ ವಿಶ್ವ ಮಾನ್ಯತೆ ತಂದು ಕೊಟ್ಟಿದ್ದು ವಚನ ಸಾಹಿತ್ಯ. ಇದು ಸರ್ವರಿಗೂ ಲೇಸು ಬಯಸುವ, ಬದುಕಿಗೆ ಸರಿಯಾದ ಮಾರ್ಗದರ್ಶನ ಮಾಡಿ ಜೀವನಕ್ಕೆ ಭದ್ರ ಬುನಾದಿ ಹಾಕಿ ಕೊಡಲಿದೆ ಎಂದು ಗದಗದ ತೋಂಟದಾರ್ಯ ಮಠದ ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ ನುಡಿದರು.

ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ಇಂದು ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ 30ನೇ ಸರ್ವ ಸದಸ್ಯರ ವಾರ್ಷಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಪರಿಷತ್ತಿನ ಪದಾಕಾರಿಗಳು ಕ್ರಿಯಾಶೀಲರಾಗಿ ಕೆಲಸ ಮಾಡಬೇಕು. ಆಗ ಮಾತ್ರ ಸಂಘಟನೆ ಅಭಿವೃದ್ಧಿಯಾಗಿ ಕನ್ನಡದ ಕಣ್ಮಣಿಯಾಗಲಿದೆ. ಜನರಿಗೆ ಬೆಳಕು ನೀಡುವ ವಚನ ಸಾಹಿತ್ಯವನ್ನು ಜನ ಮನಕ್ಕೆ ತಲುಪಿಸುವ ಕೈಂಕರ್ಯವನ್ನು ಶರಣ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಸಾಹಿತ್ಯ ಲೋಕದಿಂದ ಶರಣ ಸಾಹಿತ್ಯವನ್ನು ಬೇರ್ಪಡಿಸಿದರೆ, ಕನ್ನಡ ಸಾಹಿತ್ಯದಲ್ಲಿ ಏನೂ ಉಳಿಯುವುದಿಲ್ಲ ಎಂದ ಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ತು ಪ್ರಸ್ತುತ 15 ಸಾವಿರ ಸದಸ್ಯತ್ವವನ್ನು ಹೊಂದಿದೆ. ಬರುವ ವಾರ್ಷಿಕ ಸಭೆಯ ಹೊತ್ತಿಗೆ ಅದು 30 ಸಾವಿರ ದಾಟುವ ನಿಟ್ಟಿನಲ್ಲಿ ಸದಸ್ಯತ್ವ ಅಭಿಯಾನ ನಡೆಸುವಂತೆ ಹೇಳಿದರು.

ಪಾಂಡೋಮಟ್ಟಿ ವಿರಕ್ತಮಠದ ಶ್ರೀ ಗುರುಬಸವ ಸ್ವಾಮೀಜಿ ಮಾತನಾಡಿ, ಶರಣ ಸಾಹಿತ್ಯ ಪರಿಷತ್ತು ಅತ್ಯಂತ ಪಾರದರ್ಶಕವಾಗಿರುವ ಸಂಸ್ಥೆಯಾಗಿದೆ ಎಂದು ಶ್ಲಾಘಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿಗಿಂತಲೂ ಪರಿಣಾಮಕಾರಿಯಾಗಿ ಶರಣ ಸಾಹಿತ್ಯ ಪರಿಷತ್ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಸ್ವಾರ್ಥಿಗಳಿಗೆ ಅವಕಾಶವಿಲ್ಲ ಎಂದರು.

ಶರಣ ಸಾಹಿತ್ಯ ಪರಿಷತ್ ಕೇವಲ ರಾಜ್ಯಕ್ಕೆ ಸೀಮಿತವಾಗಿರದೆ, ದೇಶದ ಹೊರ ರಾಜ್ಯಗಳಲ್ಲೂ ತನ್ನ ಕಾರ್ಯ ಚಟುವಟಿಕೆ ವಿಸ್ತರಿಸಿಕೊಂಡಿದೆ. ಪರಿಷತ್ತಿನ ಜಿಲ್ಲಾಧ್ಯಕ್ಷರು ಹಾಗೂ ಕದಳಿ ವೇದಿಕೆ ಅಧ್ಯಕ್ಷರ ನಡುವೆ ಸಂಘರ್ಷಕ್ಕೆ ಎಡೆ ಮಾಡಿಕೊಡದೇ ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪರಿಷತ್ತಿನ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ನಾಡೋಜ ಗೋ.ರು. ಚನ್ನಬಸಪ್ಪ, ಮಾಜಿ ಸಚಿವರಾದ ಎಸ್.ಎಸ್. ಪಾಟೀಲ್, ಲೀಲಾದೇವಿ ಆರ್. ಪ್ರಸಾದ್, ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಪದಾಧಿಕಾರಿಗಳಾದ ಹಂಪಯ್ಯ, ರವೀಶ್ ಕ್ಯಾತನಬೀಡು, ಪ್ರಕಾಶ್ ಅಂಗಡಿ, ಶಿವರಾಜ್ ಕಬ್ಬೂರು ಸೇರಿ ಎಲ್ಲಾ ಜಿಲ್ಲಾ ಘಟಕಗಳ ಅಧ್ಯಕ್ಷರು ಉಪಸ್ಥಿತರಿದ್ದರು.

ಡಾ.ಸಿ.ರಾ. ಹೊನ್ನಲಿಂಗಯ್ಯ ಸ್ವಾಗತಿಸಿದರು. ಕದಳಿ ವೇದಿಕೆ ಮಹಿಳಾ ಸದಸ್ಯರು ಪ್ರಾರ್ಥಿಸಿದರು ಭರಮಪ್ಪ ಮೈಸೂರು ಕಾರ್ಯಕ್ರಮ ನಿರೂಪಿಸಿದರು.

> ಗೋ.ರು. ಚನ್ನಬಸಪ್ಪನವರು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿದ್ದಾಗ 'ಒಬ್ಬ ಕನ್ನಡಿಗ ಒಂದು ರೂಪಾಯಿ' ಘೋಷ ವಾಕ್ಯದೊಂದಿಗೆ ಆ ಸಂಸ್ಥೆಗೆ ಹೆಚ್ಚಿನ ಸದಸ್ಯರನ್ನು ಮಾಡಿಸಿದ್ದರು. ಈ ಸೂತ್ರವನ್ನು ನಮ್ಮ ಶರಣ ಸಾಹಿತ್ಯ ಪರಿಷತ್ತೂ ಅನುಸರಿಸಿದರೆ ಸದಸ್ಯತ್ವವನ್ನು ಹೆಚ್ಚಿಸಬಹುದು.
> - ಶ್ರೀ ಗುರುಬಸವ ಸ್ವಾಮೀಜಿ, ಪಾಂಡೋಮಟ್ಟಿ

#### ಸಭೆಯ ನಿರ್ಣಯಗಳು

- ವಿಶ್ವವಿದ್ಯಾನಿಲಯಗಳಲ್ಲಿರುವ ಬಸವ ಪೀಠಗಳಿಗೆ ವಾರ್ಷಿಕ ತಲಾ 50 ಲಕ್ಷ ರೂ. ಅನುದಾನ ಒದಗಿಸಬೇಕು.
- ಜಿಲ್ಲಾಡಳಿತಗಳಿಂದ ಆಯೋಜಿಸುವ ಶರಣ ಜಯಂತಿಗೆ ಆಯಾ ಜಿಲ್ಲೆಯ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರನ್ನು ಆಹ್ವಾನಿಸಬೇಕು
- ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶರಣರ ಕುರಿತು ಗೋಷ್ಠಿಗಳನ್ನು ಆಯೋಜಿಸಬೇಕು.

## ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ ಆಯ್ಕೆ ಪಟ್ಟಿ ಪ್ರಕಟ

ದಾವಣಗೆರೆ, ಸೆ.15- ಜಿಲ್ಲೆಯಲ್ಲಿ ಖಾಲಿ ಇದ್ದ 40 ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜಿಲ್ಲಾ ಕಚೇರಿ ಸೂಚನಾ ಫಲಕದಲ್ಲಿ ಇಂದು ಪ್ರಕಟಿಸಲಾಗಿದೆ.

ಅಭ್ಯರ್ಥಿಗಳು ಕಚೇರಿ ವೇಳೆ ಬಂದು ಪರಿಶೀಲಿಸಬಹುದು ಅಥವಾ www.davangerepolice.karnataka.gov.in ಇಲ್ಲಿ ವೀಕ್ಷಿಸಬಹುದು ಎಂದು ಎಸ್ಪಿ ಉಮಾ ಪ್ರಶಾಂತ್ ಅವರು ತಿಳಿಸಿದ್ದಾರೆ.

## ಪಚ್ಚಬಾಳೆ ಅಂಗಾಂಶ ಸಸಿ ಲಭ್ಯ

ದಾವಣಗೆರೆ, ಸೆ.15- ಜಿಲ್ಲೆಯ ತೋಟಗಾರಿಕೆ ಇಲಾಖೆಯ ಸಮಗ್ರ ಜೈವಿಕ ಕೇಂದ್ರದಲ್ಲಿ ಜಿ-9 (ಪಚ್ಚಬಾಳೆ) ತಳಿಯ ಅಂಗಾಂಶ ಬಾಳೆ ಸಸಿಗಳನ್ನು ಇಲಾಖಾ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಆಸಕ್ತ ರೈತರು ಮೊ. 8197954070 ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಜಿ.ಆರ್. ವೀರಭದ್ರಸ್ವಾಮಿ ತಿಳಿಸಿದ್ದಾರೆ.

LOAN/ ಲೋನ್
10 ಸಾವಿರ ಮೌಲ್ಯದ Legal & Valuation ಅನ್ನು ಉಚಿತವಾಗಿ ಮಾಡಿಸಿ ರಾಷ್ಟ್ರೀಕೃತ ಅಥವಾ ಪ್ರೈವೇಟ್ ಬ್ಯಾಂಕಿನಲ್ಲಿ
•ಸೈಟ್ •ಮನೆ ಕಟ್ಟಲು •ಮನೆ ಖರೀದಿಸಲು •ಉನ್ನತ ವಿದ್ಯಾಭ್ಯಾಸ
•ಆಸ್ತಿ ಮೇಲೆ ಲೋನ್ ಅನ್ನು ಮಾಡಿ ಕೊಡಲಾಗುವುದು
Building Licence, Eswathu and Khatha change ಗಾಗಿ ನಮ್ಮನ್ನು ಸಂಪರ್ಕಿಸಿ
Property Hub
96118 66449 *Conditions apply







ಶ್ರೀ ಹರ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಹರಿಹರ.
ಶಿವಮೊಗ್ಗ ರಸ್ತೆ ಹರಿಹರ-577601, ದಾವಣಗೆರೆ ಜಿಲ್ಲೆ



2023-2024ನೇ ಸಾಲಿನ
14ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್

ನಮ್ಮ ಸಹಕಾರ ಸಂಘದ 14ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯಸಭೆಯನ್ನು ದಿನಾಂಕ: 22-09-2024ರ ಭಾನುವಾರ ಬೆಳಗ್ಗೆ 11-30ಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಅಂಗಡಿ ಬಸಪ್ಪನವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದು, ಸಂಘದ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ವಾರ್ಷಿಕ ಸಾಮಾನ್ಯ ಸಭೆ ನಡೆಯುವ ಸ್ಥಳ : ತ್ರಿದಳ ಸಲೆಬ್ರೇಷನ್ ಕನ್ವೆನ್ಷನ್ ಹಾಲ್, ಮಹಾಲಕ್ಷ್ಮೀ ಬಡಾವಣೆ, ಸಿರಿಮನೆ ಹೋಂಸ್ಟೇ ಹತ್ತಿರ, ವಿದ್ಯಾನಗರ, ಹರಿಹರ.

ಆಡಳಿತ ಮಂಡಳಿಯ ಪರವಾಗಿ
ದಿನಾಂಕ : 07-09-2024
ಹರಿಹರ
ಸಹಿ/- ಜಿ.ವಿ. ಲೋಕೇಶ್
ಕಾರ್ಯದರ್ಶಿ

ವಿ.ಸೂ : ಈಗಾಗಲೇ ಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದೆ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ವಿನಂತಿ.

## 'ಗೃಹಲಕ್ಷ್ಮಿ' ಹೆಲ್ಪ್ ಡೆಸ್ಕ್ ರಚನೆ

ದಾವಣಗೆರೆ, ಸೆ.15- ಗೃಹಲಕ್ಷ್ಮಿ ಯೋಜನೆಗೆ ನೋಂದಣಿಯಾದರೂ ಸಹಾಯ ಧನ ಪಾವತಿಯಾಗದಿರುವ ಫಲಾನುಭವಿಗಳಿಗೆ ಸೂಕ್ತ ಮಾಹಿತಿ ನೀಡಲು ತಾಲ್ಲೂಕುವಾರು ಶಿಶು ಅಭಿವೃದ್ಧಿ ಯೋಜನಾ ಕಚೇರಿಯಲ್ಲಿ ಹೆಲ್ಪ್ ಡೆಸ್ಕ್ ತೆರೆಯಲಾಗಿದೆ. ಈವರೆಗೂ ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಕೊಳ್ಳದ ಮಹಿಳೆಯರು ಗ್ರಾಮ ಒನ್, ದಾವಣಗೆರೆ ಒನ್ ಹಾಗೂ ಸೇವಾ ಸಿಂಧು ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳಬಹುದು. ವಿವರಕ್ಕೆ ಸಂಪರ್ಕಿಸಿ : 9620380498, 9380629266, 9731262426, 9740192819, 9844019027, 9686601791.

### ಮಂಜುಳ ಎನ್. ನಿಧನ



ದಾವಣಗೆರೆ ವಿನೋಬನಗರದ, 2ನೇ ಮೇನ್, 2ನೇ ಕ್ರಾಸ್ ನಿವಾಸಿ ಮಂಜುಳ ಎನ್. ಕೋಂ ನಾರಾಯಣಪ್ಪ (ಚಿನ್ನೂರ್) ಇವರ ಧರ್ಮಪತ್ನಿ **ಮಂಜುಳ ಎನ್.** (58) ಇವರು ದಿನಾಂಕ : 15.9.2024ರ ಭಾನುವಾರ ರಾತ್ರಿ 9.15ಕ್ಕೆ ನಿಧನರಾದರು. ಮಗಳು, ಅಳಿಯ, ಮಗ, ಸೊಸೆ ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 16.9.2024ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.


ಬೇಕಾಗಿದ್ದಾರೆ
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ 4 ರಿಂದ 5 ವರ್ಷ ಅನುಭವವುಳ್ಳ
ಸೇಲ್ಸ್ ಮ್ಯಾನ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ
ಸಂಬಳ 15000 ರಿಂದ 18,000
ಸಂಪರ್ಕಿಸಿ : ಶ್ರೀ ಗಣೇಶ್ ಹೊಜೈರಿ ಮಾರ್ಟ್
ಅಶೋಕ ರಸ್ತೆ, ದಾವಣಗೆರೆ. ಫೋ. : 94482 07473

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327

ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ದಾವಣಗೆರೆ.

ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ

ದಿನಾಂಕ : 17.09.2024ನೇ ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಬ್ಯಾಂಕಿನ 2023-2024ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಮಾನ್ ರಮೇಶ್ ಬಿ.ಎಸ್. ಹೆಚ್. ಬಸಾಪುರ ಇವರ ಘನ ಅಧ್ಯಕ್ಷತೆಯಲ್ಲಿ ದಾವಣಗರೆಯ ತರಳಬಾಳು ಸಭಾ ಭವನ, ಹದಡಿ ರಸ್ತೆ, ದಾವಣಗೆರೆ ಇಲ್ಲಿ ನಡೆಸಲು ಏರ್ಪಡಿಸಲಾಗಿದೆ. ಕಾರಣ ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಕೋರಿದೆ.




ವಿಶೇಷ ಸೂಚನೆ : ಎಲ್ಲಾ ಅರ್ಹ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ವರದಿ ಪುಸ್ತಕವನ್ನು ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿರುತ್ತದೆ. ಮಾನ್ಯ ಸದಸ್ಯ ಬಾಂಧವರಿಗೆ ವಾರ್ಷಿಕ ಮಹಾಸಭೆಯ ಪುಸ್ತಕವು ಸ್ವೀಕೃತಿಯಾಗದೇ ಇದ್ದಲ್ಲಿ ಪ್ರಕಟಣೆಯೇ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವೆಂದು ಪರಿಗಣಿಸಿ, ಈ ಮೂಲಕ ಮಹಾಸಭೆಗೆ ಹಾಜರಾಗಲು ವಿನಂತಿಸಲಾಗಿದೆ.




KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas